بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ವರ್ಷ: 01

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 26

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

09 ಜುಲೈ 2020, 09 ವಫಾ 1399 ಹಿಜರಿ ಶಮ್‌ಸಿ,
17 ಝುಲ್-ಖಅದಃ 1441 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِکْ لَنَا فِیْ عُمُرِہٖ وَاَمْرِہٖ

## ಅಲ್ಲಾಹನ ಉಪದೇಶ

اِنَّمَا التَّوۡبَۃُ عَلَی اللّٰہِ لِلَّذِیۡنَ یَعۡمَلُوۡنَ السُّوۡٓءَ بِجَہَالَۃٍ ثُمَّ یَتُوۡبُوۡنَ مِنۡ قَرِیۡبٍ فَاُولٰٓئِکَ یَتُوۡبُ اللّٰہُ عَلَیۡہِمۡ ؕ وَکَانَ اللّٰہُ عَلِیۡمًا حَکِیۡمًا ○ (النساء:18)

***(ಅನ್ನಿಸಾಅ್:18)***

ಅಂದರೆ: ಅಜ್ಞಾನದಿಂದ ತಪ್ಪುಮಾಡಿ, ಕೂಡಲೇ ಪಶ್ಚಾತ್ತಾಪಪಡುವವರ ಪಶ್ಚಾತ್ತಾಪ ಮಾತ್ರವೇ ಅಲ್ಲಾಹನಿಂದ ಸ್ವೀಕಾರಾರ್ಹ. ಅಲ್ಲಾಹನು ಅವರ ಮೇಲೆ ಕರುಣೆದೋರುತ್ತಾನೆ. ಅಲ್ಲಾಹನು ಎಲ್ಲ ಬಲ್ಲವನೂ ಬುದ್ಧಿಶಾಲಿಯೂ ಆಗಿದ್ದಾನೆ.

**ಮಾರ್ಗದರ್ಶನವನ್ನು ಆಶಿಸುವವನು ತಿಳಿದುಕೊಳ್ಳಲಿ: ಪ್ರಸಕ್ತ ಕಾಲಘಟ್ಟದಲ್ಲಿ ಹದಿನಾಲ್ಕನೆಯ ಶತಮಾನದ ಮುಜದ್ದಿದ್ (ಸುಧಾರಕ) ರ ಕೆಲಸವು ಶಿಲುಬೆಯನ್ನು ತುಂಡರಿಸುವುದಾಗಿದೆ. ಏಕೆಂದರೆ ಶಿಲುಬೆಯ ಅಪನಂಬಿಕೆ, ಗೊಂದಲಗಳು ಭಯಂಕರವಾದ ರೀತಿಯಲ್ಲಿ ಹರಡಿಕೊಂಡಿದೆ.**

**ಸತ್ಯಾನ್ವೇಷಕರ ಕಡೆ ನಾವು ಗಮನ ಹರಿಸಬೇಕಾಗಿದೆ. ಆದರೆ ಸತ್ಯದೆಡೆ ಲಕ್ಷ್ಯವಿಲ್ಲದವರ ಮತ್ತು ಸತ್ಯದ ವಿರುದ್ಧ ನಂಬಿಕೆಯುಳ್ಳವರಿಂದ ನಾವು ಏನು ಉಪಯೋಗ ಪಡೆಯಬಹುದು? ನೆನಪಿಡಿರಿ ದ್ವೇಷಿಗಳಿಗೆ ಸನ್ಮಾರ್ಗ ಲಭಿಸುವುದಿಲ್ಲ, ವಿವೇಕ ರಹಿತರಿಗೆ ಮಾರ್ಗದರ್ಶನ ದೊರೆಯುವುದಿಲ್ಲ.**

# ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಹದಿನಾಲ್ಕನೆ ಶತಮಾನದ ಮುಜದ್ದಿದರ (ಸುಧಾರಕರ) ಕಾರ್ಯಸಾಧನೆ

ಹದಿನಾಲ್ಕನೆ ಶತಮಾನದ ಮುಜದ್ದಿದರ (ಸುಧಾರಕರ) ಕಾರ್ಯಸಾಧನಯ ಕುರಿತು ಹೇಳಿದರು: "ಕ್ರೈಸ್ತರ ಕ್ಷೋಭೆ(ಫಿತ್ನ)ಯು ಕ್ಷೋಭೆಗಳ ಮೂಲವಾಗಿದೆ (ಉಮ್ಮುಲ್ ಫೀತ್ನ) ಆದುದರಿಂದ ಹದಿನಾಲ್ಕನೆಯ ಮುಜದ್ದಿದರ (ಸುಧಾರಕರ) ಕಾರ್ಯವು **"ಯಕ್‌ಸ್ಸಿರುಸ್ಸಲೀಬ್"** ಎಂದಾಗಿದೆ. ಅದರ ಸಂಕೇತ ಅವರ ಮೇಲೆ ಅನ್ವಯವಾದ ಕಾರಣ ಅವರು ಹದಿನಾಲ್ಕನೆ ಶತಮಾನದ ಮುಜದ್ದಿದ್ ಮತ್ತು "ಮಸೀಹ್ ಮೌವೂದ್" ಎಂದು ಕರೆಯಲ್ಪಟ್ಟಿದ್ದಾರೆ. ಏಕೆಂದರೆ ಹದೀಸುಗಳಿಂದ ಮಸೀಹ್ ಮೌವೂದರ ಕಾರ್ಯವು **"ಯಕ್‌ಸಿರುಸ್ಸಲಿಬ್"** ಎನ್ನಲಾಗಿದೆ. ಇದೀಗ ನಮ್ಮ ವಿರೋಧಿಗಳೂ ಒಪ್ಪಬೇಕಾಗುತ್ತದೆ. ಹದಿನಾಲ್ಕನೆ ಶತಮಾನದ ಮುಜದ್ದಿದರ ಕಾರ್ಯ **"ಯಕ್‌ಸಿರುಸ್ಸಲಿಬ್"** ವೇ ಆಗಬೇಕಾಗಿದೆ ಎಂದು. ಏಕೆಂದರೆ ಅವರ ಮುಂದೆ ಅದೇ ಆಪತ್ತು ಎದುರಾಗಿದೆ ಆದುರಿಂದ ನಿರಾಕರಣೆಗೆ ಕಾರಣವೇ ಇಲ್ಲದಂತಾಗಿದೆ.

"ಹದಿನಾಲ್ಕನೇ ಶತಮಾನದ ಮುಜದ್ದಿದರೇ ಮಸೀಹ್ ಮೌವೂದ್ ಆಗಿರುತ್ತಾರೆ. ಸತ್ಯಾನ್ವೇಷಕರ ಬಗ್ಗೆಯೇ ನಾವು ಕಾಳಜಿ ವಹಿಸಬೇಕಾಗಿದೆ ಆದರೆ ಸತ್ಯದೆಡೆ ಲಕ್ಷ್ಯವಿಲ್ಲದವರ ಮತ್ತು ಸತ್ಯದ ತದ್ವಿರುದ್ಧ ನಂಬಿಕೆಯುಳ್ಳವರಿಂದ ನಾವು ಏನು ಉಪಯೋಗ ಪಡೆಯಬಹುದು? ನೆನಪಿಡಿರಿ! ದ್ವೇಶಿಗಳಿಗೆ ಸನ್ಮಾರ್ಗ ಲಭಿಸುವುದಿಲ್ಲ, ವಿವೇಕರಹಿತರಿಗೆ ಮಾರ್ಗದರ್ಶನ ದೊರೆಯುವುದಿಲ್ಲ. ಆದುದರಿಂದ ಮಾರ್ಗದರ್ಶನ ಬಯಸುವವರು ತಿಳಿದುಕೊಳ್ಳಿರಿ. ಪ್ರಸಕ್ತ ಪರಿಸ್ಥಿತಿಗಳಲ್ಲಿ ಹದಿನಾಲ್ಕನೆ ಶತಮಾನದ ಮುಜದ್ದಿದರ ಕಾರ್ಯವು ಶಿಲುಭೆಯನ್ನು ತುಂಡರಿಸುವುದಾಗಿದೆ. ಏಕೆಂದರೆ ಶಿಲುಭೆಯ ಅಪನಂಬಿಕೆಯ ಗೊಂದಲಗಳು ಭಯಂಕರವಾದ ರೀತಿಯಲ್ಲಿ ಹರಡಿಕೊಂಡಿದೆ. ಇಸ್ಲಾಮ್ ಎಂತಹ ಧರ್ಮವಾಗಿತ್ತೆಂದರೆ ಒಬ್ಬನೇ ಒಬ್ಬ ಧರ್ಮವಿಚ್ಛೇದಿತನಾದರೆ (ಮುರ್ತದ್) ಪ್ರಳಯ ಬಂದಂತಾಗುತ್ತಿತ್ತು. ಆದರೆ ಅಕಟಕಟಾ ಎಂತಹ ವಿಷಾದದ ಸಂಗತಿಯಾಗಿದೆ. ಈಗ ಧರ್ಮ ಬಿಟ್ಟವರ ಸಂಖ್ಯೆ ಲಕ್ಷೋಪಲಕ್ಷಗಳವರೆಗೆ ಹೋಗಿದೆ. ಮುಸಲ್ಮಾನ್ ಮನೆಗಳಲ್ಲಿ ಹುಟ್ಟಿದವರು ಇದೀಗ ರಸೂಲುಲ್ಲಾಹ್(ಸ) ರವರಂತಹ ಪವಿತ್ರ, ಪರಿಪೂರ್ಣ, ಮತ್ತು ಲೋಕದ ಅದ್ವೀತಿಯ ನಬಿ(ಸ) ರವರ ಕುರಿತು ವಿಭಿನ್ನ ರೀತಿಯ ಮನಸ್ಸಿಗೆ ನೋವುಂಟು ಮಾಡುವ ಆರೋಪಗಳನ್ನು ಮಾಡುತ್ತಿದ್ದಾರೆ. ಅವರು ಕೋಟ್ಯಾನುಗಟ್ಟಲೆ ಗ್ರಂಥಗಳನ್ನು ಬರೆದು ಪ್ರಕಟಿಸಿದ್ದಾರೆ. ಹಲವು ಸಾಪ್ತಾಹಿಕ ಮತ್ತು ಮಾಸಿಕ ಪತ್ರಿಕೆಗಳು ಈ ಉದ್ದೇಶದಿಂದ ಜಾರಿಯಲ್ಲಿವೆ. ಇಂತಹ ಪರಿಸ್ಥಿತಿಗಳಲ್ಲಿ ಅಲ್ಲಾಹನಿಗೆ ಮುಜದ್ದಿದ್‌ರನ್ನು ಕಳುಹಿಸುವ ಅಗತ್ಯವಿರಲಿಲ್ಲವೆ? ಮುಜದ್ದಿದ್ ಆಗಿ ಬಂದವನ ಕೆಲಸ ನೀವೇ ಯೋಚಿಸಿ ಹೇಳಿ, ಕೈಬಿಟ್ಟು ಬಿಟ್ಟು (ರಫ್ಅಯದೇನ್) ನಮಾಝ್ ಮಾಡುವ ತಂಟೆಗಳು ಅಥವಾ ಆಮೀನ್ ಜೋರಾಗಿ ಹೇಳುವುದು ಮುಂತಾದ ಕ್ಷಲ್ಲಕ ವಿಷಯಗಳ ಕುರಿತು ಬಗೆಹರಿಸುವುದು ಆಗಿತ್ತೆ?

ಯೋಚಿಸಿರಿ, ವೈದ್ಯನಾದವನು ಹೆಮ್ಮಾರಿಯಾಗಿ ಬಂದ ರೋಗವನ್ನು ಬಿಟ್ಟು ಇನ್ನಾವುದೇ ರೋಗದ ಬಗ್ಗೆ ಚಿಂತಿಸುವನೇ. ರಸೂಲುಲ್ಲಾಹ್(ಸ)ರನ್ನು ಅವಹೇಳನ ಮಾಡುವ ಕಾರ್ಯ ಮಿತಿಮೀರಿ ಹೋಗಿದೆ. ಇಂದು ಪರಿಸ್ಥಿತಿ ಎಲ್ಲಿಯವರೆಗೆ ಬಂದು ನಿಂತಿದೆ ಎಂದರೆ ಅವಹೇಳನಕಾರಿ ಗ್ರಂಥಗಳನ್ನು ಓದುತ್ತಾರೆ ಮತ್ತು ಕೇಳುತ್ತಾರೆ ಆದರೆ ಅವರ ಮರ್ಯಾದೆ ಪ್ರಜ್ಞೆ ಮೂಡುವುದಿಲ್ಲ ಅದೇಕೆ, ಅವರ ಪೈಕಿ ಶೀಷಭಾವನೆ ಸಹ ಉಂಟಾಗುತ್ತಿಲ್ಲ ಬದಲು ಇಂತಹ ವಿಶೇಷ ಪರಿಸ್ಥಿತಿಗಳಲ್ಲಿ ಸುಧಾರಣೆಗಾಗಿ ಕಳುಹಿಸಲ್ಪಟ್ಟ ವ್ಯಕ್ತಿಯೊಬ್ಬರನ್ನು, ರಸೂಲುಲ್ಲಾಹ್(ಸ) ರವರ ಮಾನ ಮತ್ತು ವೈಭವಗಳನ್ನು ಪುನಃಸ್ಥಾಪಿಸಲು ಬಂದವರನ್ನು ವಿರೋಧಿಸುತ್ತಿದ್ದಾರೆ ಮತ್ತು ಅಪಹಾಸ್ಯ ಮಾಡುತ್ತಿದ್ದಾರೆ. ಅಲ್ಲಾಹನೇ ಇಂತಹ ಜನರಿಗೆ ವಿವೇಕ ನೀಡುವಂತಾಗಲಿ. ಆಮೀನ್.

### ಹಝ್‌ರತ್ ರಸೂಲುಲ್ಲಾಹ್(ಸ) ರವರ ಪುಷ್ಟಿ ಸುಧಾರಣೆಯ ಕುರಿತು ಒಂದು ಮಹೋನ್ನತವಾದ ಭವಿಷ್ಯವಾಣಿ:

ಹೇಳೀದರು: ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಒಂದು ಅಧ್ಯಾಯವನ್ನೇ ಅವತರಿಸಿ ರಸೂಲುಲ್ಲಾಹ್(ಸ)ರವರ ಮಹಾನತೆಯನ್ನೂ ಶ್ರೇಷ್ಠತೆಯನ್ನು ಪ್ರಕಟಪಡಿಸಿದ್ದಾನೆ. ಆ ಅಧ್ಯಾಯ **"ಅಲಮ್‌ತರ ಕೈಫ ಫಅಲಾ ರಬ್ಬುಕ ಬಿ ಅಸ್‌ಹಾಬಿಲ್ ಫೀಲ್** (ಅಲ್ ಫೀಲ್-2) ಆಗಿದೆ. ಆ ಅಧ್ಯಾಯವು ರಸೂಲುಲ್ಲಾಹ್(ಸ)ರವರು ಕಷ್ಟ ನೋವುಗಳನ್ನು ಎದುರಿಸುತ್ತಿರುವ ಕಾಲದ್ದಾಗಿದೆ. ಅಂತಹ ಪರಿಸ್ಥಿತಿಗಳಲ್ಲಿ ಅಲ್ಲಾಹನು ನಾನು ನಿನಗೆ ಸಹಾಯ, ಸಹಕಾರಗಳನ್ನು ನೀಡುವವನಾಗಿದ್ದೇನೆ ಎಂದು ಭರವಸೆ ನೀಡುತ್ತಾರೆ.

ಅದರಲ್ಲಿ ಒಂದು ಮಹೋನ್ನತವಾದ ಭವಿಷ್ಯವಾಣಿ ಇದೆ. "ನಿನ್ನ ಪ್ರಭು ಆ ಆನೆಯ ಜನರೊಡನೆ ಹೇಗೆ ವರ್ತಿಸಿದನೆಂದು ನೀನು ಕಂಡಿಲ್ಲವೇ? ಅವನು ಅವರ ಕುತಂತ್ರಗಳನ್ನು ವಿಫಲಗೊಳ್ಳುವಂತೆ ಮಾಡಲಿಲ್ಲವೇ? ಆ ಸಣ್ಣ ಸಣ್ಣ ಪಕ್ಷಿಗಳ ಕೈಯಲ್ಲಿ ಯಾವ ಆಯುಧಗಳೂ ಇರಲಿಲ್ಲ ಬದಲು ಮಣ್ಣಿತ್ತು. ಸಿಜ್ಜೀಲ್ ಎಂದರೆ ತೇವೆಗೊಂಡ ಮಣ್ಣು. ಆ ಅಧ್ಯಾಯವನ್ನು ಅಲ್ಲಾಹನು ರಸೂಲುಲ್ಲಾಹ್ (ಸ)ರವರಿಗೆ ಖಾನಕಅಬದ ರೂಪದಲ್ಲಿ ಪ್ರದರ್ಶಿಸಿದ್ದಾನೆ. ಅಸ್ಹಾಬುಲ್ ಫೀಲ್ (ಆನೆಯ ಜನರು) ಅವರ ಈ ಘಟನೆಯನ್ನು ಮುಂದಿಟ್ಟು ಅಲ್ಲಾಹನು ರಸೂಲುಲ್ಲಾಹ್ (ಸ) ರವರ ವಿಷಯದ ಭವಿಷ್ಯವಾಣಿ ಪ್ರಕಟಿಸುತ್ತಾರೆ.

***(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)***

# ಖುತ್‌ಬ ಜುಮುಅ

**ಸಅದ್ ಹೇಳಿದರು ನನ್ನ ಖೌಮಿನವರಿಗೆ ತಿಳಿಸಿರಿ ಒಂದು ವೇಳೆ ನಿಮ್ಮ ಜೀವವಿದ್ದು ಪ್ರವಾದಿ(ಸ) ಅವರಿಗೆ ಹಾನಿವುಂಟಾದರೆ ಅಲ್ಲಾಹನ ಮುಂದೆ ನಿಮಲ್ಲಿ ಯಾವ ನೆಪವು ಇರುವುದಿಲ್ಲ.**

**ರಸೂಲುಲ್ಲಾಹ್(ಸ) ಹೇಳಿದರು: ನಿಮ್ಮ ಈ ವ್ಯಾಪಾರ ಹಿಂದೆ ಮಾಡಿದ ಎಲ್ಲಾ ವ್ಯಾಪಾರಕ್ಕಿಂತ ಹೆಚ್ಚು ಲಾಭಕರವಾಗಿದೆ. ಅಂದರೆ ಮೊದಲು ನೀವು ವ್ಯಾಪಾರದಲ್ಲಿ ಹಣ ಗಳಿಸುತ್ತಿದ್ದೀರಿ ಆದರೆ ಈಗ ಈಮಾನ್ (ಸತ್ಯವಿಶ್ವಾಸ ) ಗಳಿಸಿದ್ದೀರಿ**

**ಹಝ್ರತ್ ಉಮರ್(ರ) ಹಝ್ರತ್ ಸುಹೈಬರನ್ನು(ರ) ಬಹಳ ಪ್ರೀತಿಸುತ್ತಿದ್ದರು ಮತ್ತು ಅವರ ಬಗ್ಗೆ ಬಹಳ ಆದರ ಭಾವವನ್ನು ಹೊಂದಿದ್ದರು. ಹಝ್ರತ್ ಉಮರ್(ರ) ಗಾಯಗೊಂಡಾಗ ಹೀಗೆ ವಸಿಯ್ಯತ್ ಮಾಡಿದರು: ಹಝ್ರತ್ ಸುಹೈಬ್ ನನ್ನ ಜನಾಝ ನಮಾಝ್ ನಿರ್ವಹಿಸಲಿ. ಮೂರು ದಿನಗಳ ತನಕ ಮುಸ್ಲಿಮರ ಇಮಾಮ್ ಆಗಿ ಕಾರ್ಯ ನಿರ್ವಹಿಸಲಿ. ಅಷ್ಟರೊಳಗೆ ಶೂರಾದ ಸದಸ್ಯರು ಮುಂದಿನ ಖಲೀಫರು ಯಾರಾಗಬೇಕೆಂದು ನಿರ್ಧರಿಸಲಿ**

**ನಿಷ್ಠೆ ಮತ್ತು ಆತ್ಮೀಯತೆಯ ಮೂರ್ತಿರೂಪರಾಗಿದ್ದ ಬದರಿ ಸಹಾಬಿಯಾದ ಹಝ್ರತ್ ಸುಹೈಬ್ ಬಿನ್ ಸನಾನ್(ರ) ಮತ್ತು ಹಝ್ರತ್ ಸಅದ್ ಬಿನ್ ರಬೀಅ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

**ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಮೊದಲು ಮತ್ತು ಅವರ ಅನಂತರ ಲೋಕದ ಚರಿತ್ರೆಯಲ್ಲಿ ಅವರ ಹಾಗೆ ಮಹಿಳೆಯರ ಹಕ್ಕುಗಳನ್ನು ಸಂರಕ್ಷಿಸಿದವರು ಬೇರೆ ಯಾರೂ ಇಲ್ಲ.**

**ಇಸ್ಲಾಮ್ ಮಹಿಳೆಯರಿಗೆ ನೀಡಿದ ಸ್ಥಾನವನ್ನು ಯಾವುದೇ ಧರ್ಮ ಅವರಿಗೆ ನೀಡಿಲ್ಲ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **05-06-2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ. اَلرَّحْمٰنِ الرَّحِيمِ. مٰلِكِ يَوْمِ الدِّينِ.

إِيَّاكَ نَعْبُدُ وَإِيَّاكَ نَسْتَعِينُ. اِهْدِنَا الصِّرَاطَ الْمُسْتَقِيمَ.

صِرَاطَ الَّذِينَ أَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّالِّينَ.

ಈ ದಿನ ನಾನು ಬದರಿ ಸಹಾಬರ ಬಗ್ಗೆ ಪುನಃ ಪ್ರಸ್ತಾಪಿಸುವೆನು. ಈ ದಿನ ನಾನು ಪ್ರಸ್ತಾಪಿಸಲಿರುವ ಸಹಾಬಿಯ ಹೆಸರು ಹಝ್ರತ್ ಸುಹೈಬ್ ಬಿನ್ ಸಿನಾನ್ ರಝಿಯಲ್ಲಾಹು ಅನ್‌ಹು. ಅವರ ತಂದೆಯ ಹೆಸರು ಸಿನಾನ್ ಬಿನ್ ಮಾಲಿಕ್ ಎಂದು ಮತ್ತು ತಾಯಿಯ ಹೆಸರು ಸಲ್ಮಾ ಬಿನ್ತ್ ಖಈದ್. ಅವರು ಮೊಸೂಲಿನ ನಿವಾಸಿಯಾಗಿದ್ದರು. ಹಝ್ರತ್ ಸುಹೈಬ್(ರ) ರವರ ತಂದೆ ಅಥವಾ ಚಿಕ್ಕಪ್ಪ ಕಸ್ರದ ಕಡೆಯಿಂದ ಉಬುಲ್ಲದ ಮಂತ್ರವಾದಿ ಆಗಿದ್ದರು. ಉಬುಲ್ಲ ದಜ್ಲದ ಬದಿ ಇರುವ ಒಂದು ಊರಾಗಿದೆ ಅದು ನಂತರ ಬಸ್‌ರ ಎಂದು ಕರೆಯಲ್ಪಟ್ಟಿತು. ರೂಮಿಗಳು ಈ ಪ್ರದೇಶದ ಮೇಲೆ ಹಲ್ಲೆ ಮಾಡಿದಾಗ ಅವರು ಹಝ್ರತ್ ಸುಹೈಬ್ ಅವರನ್ನು ಸೆರೆಯಾಳಾಗಿ ಮಾಡಿದರು ಆಗ ಅವರು ಇನ್ನು ಚಿಕ್ಕ ವಯಸ್ಸಿನಲ್ಲಿಯೇ ಇದ್ದರು. ಅಬುಲ್ ಖಾಸಿಮ್ ಮಗ್‌ರಿಬಿರವರ ಪ್ರಕಾರ ಹಝ್ರತ್ ಸುಹೈಬ್(ರ) ರವರ ಹೆಸರು ಉಮ್ಮೈರಹ್ ಎಂದಾಗಿತ್ತು, ರೂಮಿಗಳು ಅವರ ಹೆಸರು ಸುಹೈಬ್ ಎಂದಿರಿಸಿದರು.
(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಸಂಪುಟ-3, ಪುಟ-169-170, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017) (ಅಲ್‌ಅಸಾಬ ಫೀ ತಮೀಝಿಸ್ಸಹಾಬ ಸಂಪುಟ-4, ಪುಟ-33-34, ಸುಹೈಬ್ ಬಿನ್ ಸನಾನ್, ದಾರುಲ್ ಫೀಕರ್ ಬೈರೂತ್ 2001) (ಮುಜಮುಲ್ ಬಲದಾನ್ ಸಂಪುಟ-1, ಪುಟ-33, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಸುಹೈಬ್(ರ) ರವರು ಬಹಳ ಕೆಂಪು ಬಣ್ಣದವರಾಗಿದ್ದರು. ಅವರ ಎತ್ತರ ಜಾಸ್ತಿ ಉದ್ದವೂ ಇರಲಿಲ್ಲ ಮತ್ತು ಚಿಕ್ಕವೂ ಇರಲಿಲ್ಲ. ನಿಬಿಡ ತಲೆಗೂದಲು ಹೊಂದಿದವರೂ ಆಗಿದ್ದರು. (ಉಸದುಲ್ ಗಾಬ ಸಂಪುಟ-3, ಪುಟ-41, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2016)

ಹಝ್ರತ್ ಸುಹೈಬ್(ರ) ರೂಮಿಗಳೆಡೆಯಲ್ಲಿ ಪಾಲನೆ ಪಡೆದರು. ಅವರ ನಾಲಿಗೆಯಲ್ಲಿ ತೊದಲುವಿಕೆ ಇತ್ತು. ಕಲೆಬ್ ಎಂಬವನು ಅವರನ್ನು ರೂಮಿಗಳಿಂದ ಖರೀದಿಸಿಕೊಂಡು ಮಕ್ಕಕ್ಕೆ ಬಂದಿದ್ದನು. ತದನಂತರ ಅಬ್ದುಲ್ಲಾ ಬಿನ್ ಜುದ್‌ಆನ್‌ನವರು ಅವರನ್ನು ಖರೀದಿಸಿ ಅವರನ್ನು ಸ್ವತಂತ್ರಗೊಳಿಸಿದರು. ಹಝ್ರತ್ ಸುಹೈಬ್ ಅಬ್ದುಲ್ಲಾ ಬಿನ್ ಜುದ್‌ಆನ್ ಅವರ ನಿಧನದ ತನಕ ಅವರೊಂದಿಗೆ ಮಕ್ಕದಲ್ಲಿಯೇ, ಪ್ರವಾದಿ ಮುಹಮ್ಮದ್(ಸ) ರವರ ಆಗಮನದ ತನಕ ಜೊತೆಗಿದ್ದರು. ಒಂದು ವರದಿಯ ಪ್ರಕಾರ ಹಝ್ರತ್ ಸುಹೈಬ್‌ನ ವಂಶಸ್ತರು ಹೇಳುತ್ತಾರೆ ಹಝ್ರತ್ ಸುಹೈಬ್(ರ) ಅವರಿಗೆ ಬುದ್ಧಿ ಬಂದಾಗ ಅವರು ರೂಮಿನವರಿಂದ ತಪ್ಪಿಸಿಕೊಂಡು ಮಕ್ಕಕ್ಕೆ ಆಗಮಿಸಿದ್ದರು. ಮತ್ತು ಅಬ್ದುಲ್ಲಾ ಬಿನ್ ಜುದ್‌ಆನ್‌ರವರ ಪ್ರತಿಜ್ಞಾಬದ್ಧರಾದರು. ಅವರ ನಿಧನದ ತನಕ ಅವರೊಂದಿಗೆ ಇದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಸಂಪುಟ-3, ಪುಟ-170, ಸುಹೈಬ್ ಬಿನ್ ಸನಾನ್, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017)

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ಸುಹೈಬ್ ಎಂಬ ಗುಲಾಮರನ್ನು ರೋಮ್‌ನಿಂದ ಹಿಡಿಗೂಡಲ್ಪಟ್ಟು ತರಲಾಗಿತ್ತು. ಅವರು ಅಬ್ದುಲ್ಲಾ ಬಿನ್ ಜುದ್‌ಆನರ ಗುಲಾಮರಾಗಿದ್ದರು. ಅವರನ್ನು ವಿಮೋಚಿಸಲಾಗಿತ್ತು. ಅವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬಿದ ನಂತರ ಅವರಿಗೋಸ್ಕರ ಅನೇಕ ಕಷ್ಟಗಳನ್ನು ಅನುಭವಿಸಿದ್ದರು." (ತಫ್‌ಸೀರೆ ಕಬೀರ್ ಸಂಪುಟ-6, ಪುಟ-443)

ಹಝ್ರತ್ ಮುಸ್ಲಿಹ್ ಮೌಊದ್(ರ) ಅವರ ಈ ವಿಷಯ ಪವಿತ್ರ ಖುರ್‌ಆನಿನಲ್ಲಿದೆ. ಕುಫ್ಫಾರ್ ಹೇಳುತ್ತಾರೆ ಈ ಖುರ್‌ಆನ್ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ಅವರ ಅಥವಾ ಗುಲಾಮರ ಸಹಾಯದಿಂದ ಸೃಷ್ಟಿಸಿದ್ದಾರೆ ಎಂದು. ಇದರ ಉತ್ತರ ಒಂದನೆಯದಾಗಿ ಹೀಗಿದೆ, ಈ ಗುಲಾಮರು ಮುಸ್ಲಿಮ್ ಆದ ಕಾರಣ ಅನೇಕ ರೀತಿಯ ಸಂಕಷ್ಟ, ತೊಂದರೆ, ಹಿಂಸೆಗಳಿಗೆ ಗುರಿಯಾಗಿದ್ದರು. ಏನು ಅವರು ಅಂದರೆ ಆ ಗುಲಾಮರು ಆ ಸಂಕಷ್ಟಗಳನ್ನು ತಮ್ಮ ಮೇಲೆ ಅನುಭವಿಸಲಿಕ್ಕೆ ಪ್ರವಾದಿ(ಸ) ಅವರಿಗೆ ಸಹಾಯ ಮಾಡಿದ್ದಾರೆಯೇ? ಅವರಿಗೆ ರಹಸ್ಯವಾಗಿ ಸಹಾಯ ಮಾಡಿದ್ದಲ್ಲದೇ ಇದು ವ್ಯಕ್ತವಾದ ನಂತರ ಅವರು ಬಹಳ ದೃಢತ್ವದಿಂದ ಆ ಹಿಂಸೆಗಳನ್ನು ಸಹಿಸಿಕೊಂಡಿರುವರೇ? ಹೀಗೆ ಈ ವಿಷಯವನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಇದು ಬಹಳ ಟೊಳ್ಳು ಆಕ್ಷೇಪವಾಗಿದೆ. ಇದು ಆ ಮೂಮಿನ್‌ಗಳ, ಆ ಜನರ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಮೇಲಿದ್ದ ಈಮಾನ್ ಆಗಿತ್ತು. ಅಲ್ಲಾಹ್ ಹಾಗೂ ರಸೂಲುಲ್ಲಹ್(ಸ) ಅವರ ಮೇಲಿನ ಈಮಾನ್ ಆಗಿತ್ತು ಅವರನ್ನು ದೃಢವಾಗಿ ನಿಲ್ಲಿಸಿದ್ದು. ಅವರು ಪ್ರವಾದಿ(ಸ) ಅವರಿಂದ

ಇಸ್ಲಾಮ್‌ನ ಬೋಧನೆಗಳನ್ನು ತಿಳಿದು ಕೊಂಡಿದ್ದರು ಮತ್ತು ಅಲ್ಲಾಹನ ವಹಿ (ದಿವ್ಯವಾಣಿ)ಯ ಮೇಲೆ ವಿಶ್ವಾಸ ಹೊಂದಿದ್ದರು. ಏನೇ ಇರಲಿ ಈ ವಿಷಯದ ಪ್ರಸ್ತಾವನೆಯಲ್ಲಿ ಅವರು ಹೇಳಿದ್ದರು. (ತಫ್ಸೀರೆ ಕಬೀರ್ ಸಂಪುಟ–6, ಪುಟ–441–443)

ಹಝ್ರತ್ ಅಮ್ಮಾರ್ ಬಿನ್ ಯಾಸಿರ್ ಹೇಳುತ್ತಾರೆ ನಾನು ಸುಹೈಬ್ ಅವರೊಂದಿಗೆ ದಾರುಲ್ ಅರ್‌ಖಮ್‌ನ ಬಾಗಿಲಿನಲ್ಲಿ ಭೇಟಿಯಾದಾಗ ಪ್ರವಾದಿ ಮುಹಮ್ಮದ್(ಸ) ಆಸೀನರಾಗಿದ್ದರು. ನಾನು ಅವರೊಂದಿಗೆ ಪ್ರಶ್ನಿಸಿದೆ ನಿಮ್ಮ ಉದ್ದೇಶ ಏನಾಗಿದೆ? ಸುಹೈಬ್(ರ) ನನಗೆ ಹೇಳಿದರು ನಿಮ್ಮ ಉದ್ದೇಶ ಏನಾಗಿದೆ? ಅದಕ್ಕೆ ನಾನು ಉತ್ತರಿಸಿದೆ ನಾನು ಬಯಸುವುದೇನೆಂದರೆ ಪ್ರವಾದಿ ಮುಹಮ್ಮದ್(ಸ) ರವರ ಬಳಿ ಹಾಜರಾಗಿ ಅವರ ಉಪದೇಶಗಳನ್ನು ಆಲಿಸುವುದಾಗಿದೆ. ಹಝ್ರತ್(ರ) ಹೇಳಿದರು ನಾನು ಸಹ ಇದನ್ನೇ ಬಯಸುತ್ತೇನೆ. ಹಝ್ರತ್ ಅಮ್ಮಾರ(ರ) ಹೇಳುತ್ತಾರೆ ತದನಂತರ ನಾವಿಬ್ಬರು ಪ್ರವಾದಿ(ಸ) ರವರ ಬಳಿ ಹೋದೆವು ಆಗ ಅವರು(ಸ) ನಮಗೆ ಇಸ್ಲಮ್ ತಿಳಿಸಿದರು ಆಗ ನಾವು ಇಸ್ಲಾಮ್ ಸವೀಕರಿಸಿದೆವು. ನಾವು ಇಡೀ ದಿವಸ ಅಲ್ಲಿಯೇ ತಂಗಿದ್ದೆವು. ತದನಂತರ ಸಂಜೆ ನಾವು ರಹಸ್ಯವಾಗಿ ಅಲ್ಲಿಂದ ಹೊರಟೆವು. ಹಝ್ರತ್ ಸುಹೈಬ್ ಮತ್ತು ಹಝ್ರತ್ ಅಮ್ಮಾರ್ ಇವರಿಬ್ಬರು ಮೂವತ್ತಕ್ಕಿಂತ ಹೆಚ್ಚು ಜನರು ಮುಸ್ಲಿಮರಾದ ನಂತರ ಮುಸ್ಲಿಮರಾದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಸಂಪುಟ–3, ಪಟು–171, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017)

ಹಝ್ರತ್ ಅನಸ್(ರ) ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಇಸ್ಲಾಮ್ ಧರ್ಮದಲ್ಲಿ ಪ್ರಥಮವಾಗಿ ಪ್ರವೇಶಿಸಿದವರು ನಾಲ್ವರಾಗಿದ್ದಾರೆ. ಅರಬಿಗಳಲ್ಲಿ ನಾನು ಪ್ರಥಮ ವಿಶ್ವಾಸಿಯಾಗಿದ್ದೇನೆ. ಸುಹೈಬ್ ರೂಮೀ ಜನರಲ್ಲಿ ಪ್ರಥಮ ವಿಶ್ವಾಸಿಯಾಗಿದ್ದಾರೆ. ಸಲ್ಮಾನ್ ಫಾರಸೀ ವಂಶಜರಲ್ಲಿ ಪ್ರಥಮ ವಿಶ್ವಾಸಿಯಾಗಿದ್ದಾರೆ. ಬಿಲಾಲ್ ಕಪ್ಪು ವರ್ಣದ ಜನರಲ್ಲಿ ಪ್ರಥಮ ವಿಶ್ವಾಸಿಯಾಗಿದ್ದಾರೆ. (ಉಸದುಲ್‌ಗಾಬ ಸಂಪುಟ–3, ಪುಟ–39, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2016)

ಹಝ್ರತ್ ಅಬ್ದುಲ್ಲ ಬಿನ್ ಮಸ್‌ಊದ್(ರ) ವರದಿ ಮಾಡುತ್ತಾರೆ: ಮೊಟ್ಟ ಮೊದಲಿಗೆ ತಮ್ಮ ಇಸ್ಲಾಮ್ ಧರ್ಮವನ್ನು ಘೋಷಿಸಿದವರು ಏಳು ಜನರಿದ್ದಾರೆ. ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮ್‌ರವರ ಮೇಲೆ ಶರಿಯ್ಯತ್ ಅವತರಿಸಿತ್ತು, ಹಝ್ರತ್ ಅಬೂಬಕ್ಕರ್(ರ), ಹಝ್ರತ್ ಅಮ್ಮಾರ್(ರ) ಮತ್ತು ಅವರ ತಾಯಿ ಸುಮಯ್ಯ(ರ), ಸುಹೈಬ್(ರ), ಬಿಲಾಲ್(ರ) ಮತ್ತು ಮಿಖ್ದಾದ್(ರ). ಪ್ರವಾದಿ(ಸ) ಅವರಿಗೆ ತಮ್ಮ ಚಿಕ್ಕಪ್ಪರಾದ ಅಬೂತಾಲಿಬ್‌ರವರ ಮುಖಾಂತರ ರಕ್ಷಣೆ ನೀಡಲಾಯಿತು ಮತ್ತು ಅಬೂಬಕ್ಕರ್‌ರವರಿಗೆ ಅಲ್ಲಾಹನು ಅವರ ಖೌಮಿನ ಮುಖಾಂತರ ರಕ್ಷಣೆ ನೀಡಿದನು. ಇದರ ಬಗ್ಗೆ ಕಳೆದ ಖುತ್‌ಬದಲ್ಲಿಯು ವಿವರಿಸಲಾಗಿದೆ. ಇದು ವರದಿಗಾರನ ಪ್ರಕಾರ ಆಗಿತ್ತು ಇಲ್ಲದಿದ್ದರೆ ಪ್ರವಾದಿ(ಸ) ಅವರು ಮತ್ತು ಹಝ್ರತ್ ಅಬೂಬಕ್ಕರ್(ರ) ಅವರು ಅವರ ಹಿಂಸೆಗಳನ್ನು ಅನುಭವಿಸಬೇಕಾಗಿತ್ತು. ಮೊದಲಿಗೆ ಇದರ ಬಗ್ಗೆ ಬಹಳ ಚರ್ಚೆಗಳು ನಡೆಯಿತು ಆದರೆ ಪ್ರಯೋಜನವಾಗಲಿಲ್ಲ. ಏನೇ ಇರಲಿ ವರದಿಗಾರರು ಹೇಳುತ್ತಾರೆ ಉಳಿದವರನ್ನು ಮುಶ್ರಿಕ್‌ಗಳು (ಬಹುದೇವಾರಾಧಕರು) ಹಿಡಿದುಕೊಂಡು ಕಬ್ಬಿಣದ ಸರಪಳಿಗಳನ್ನು ಹಾಕಿ ಅವರೆಲ್ಲರನ್ನು ಕಡು ಬಿಸಿಲಿನಲ್ಲಿ ನಡೆಸುತ್ತಿದ್ದರು. ಹೀಗೆ ಅವರಲ್ಲಿ ಬಿಲಾಲ್(ರ) ಅವರನ್ನು ಬಿಟ್ಟು ಎಲ್ಲರು ಅವರ ಮಾತನ್ನು ಒಪ್ಪಿಕೊಂಡಿದ್ದರು ಆದರೆ ಬಿಲಾಲ್ ಒಪ್ಪಲಿಲ್ಲ ಏಕೆಂದರೆ ಅವರ ತಮ್ಮ ಆತ್ಮವನ್ನು ಅಲ್ಲಾಹನಿಗೋಸ್ಕರ ಅರ್ಪಿಸಿದ್ದರು. ಮತು ಅವರು ತಮ್ಮ ಖೌಮಿನಲ್ಲಿಯು ಅಯೋಗ್ಯರಾಗಿದ್ದರು. ಆ ಮುಶ್ರಿಕ್‌ಗಳು ಅವರನ್ನು ಹಿಡಿದು ಹುಡುಗರ ಕೈಗೆ ನೀಡುತ್ತಿದ್ದರು ಅವರನ್ನು ಮಕ್ಕದ ಘಾಟಿಗಳಲ್ಲಿ ಸುತ್ತಾಡಿಸುತ್ತಿದ್ದರು. ಬಿಲಾಲ್ ಕೇವಲ ಅಹದ್ ಅಹದ್ ಎನ್ನುತ್ತಿದ್ದರು.
(ಸನನ್ ಇಬ್ನೆ ಮಾಜ, ಕಿತಾಬುಸ್ಸನ, ಹದೀಸ್–150)

ಅವರೆಲ್ಲರು ಬಹಳ ಹಿಂಸೆಗಳನ್ನು ಅನುಭವಿಸಿದ್ದಾರೆ. ಮತ್ತು ಅವರೆಲ್ಲರು ತಮ್ಮ ಈಮಾನ್‌ನ ಮೇಲೆ ದೃಢವಾದ ನಂಬಿಕೆ ಇರಿಸಿದ್ದರು ಆದರೆ ಹಝ್ರತ್ ಬಿಲ್ಲಾಲ್(ರ) ರವರಿಗೆ ಬಹಳ ಹಿಂಸಿಸುತ್ತಿದ್ದರು ಎಂದು ವರದಿಗಳು ದೊರಕಿವೆ.

ಮತ್ತೆ ಹೀಗೆ ಹೇಳಲಾಗುತ್ತದೆ ಹಝ್ರತ್ ಸುಹೈಬ್(ರ) ದುರ್ಬಲ ಎಂದು ಮುಮಿನ್‌ಗಳು ಪರಿಗಣಿಸುತ್ತಿದ್ದರು. ಅವರೆಲ್ಲರಿಗೂ ಮಕ್ಕದಲ್ಲಿ ಅಲ್ಲಾಹನ ಮಾರ್ಗದಲ್ಲಿ ಹಿಂಸೆಗಳನ್ನು ನೀಡುತ್ತಿದ್ದರು.(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಸಂಪುಟ–3, ಪುಟ–171, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017). ಒಂದು ವರದಿ ಹೀಗಿದೆ: ಹಝ್ರತ್ ಅಮ್ಮಾರ್ ಬಿನ್ ಯಾಸಿರ್(ರ) ಎಷ್ಟರ ಮಟ್ಟಿಗೆ ಹಿಂಸೆ ನೀಡುತ್ತಿದ್ದರು ಎಂದರೆ ಅವರಿಗೆ ಯೋಚನೆಯೇ ಇರುತ್ತಿರಲಿಲ್ಲ ಅವರೊಂದಿಗೆ ಏನು ಮಾಡುತ್ತಿದ್ದಾರೆ ಎಂದು. ಇದೇ ಪರಿಸ್ಥಿತಿ ಹಝ್ರತ್ ಸುಹೈಬ್(ರ), ಹಝ್ರತ್ ಅಬೂ ಫಾಅದ್(ರ), ಹಝ್ರತ್ ಆಮಿರ್ ಬಿನ್ ಫಹೀರ(ರ) ಇನ್ನುಳಿದ ಸಹಾಬರವರಿದ್ದರು. ಈ ಸಹಾಬರವರ ಬಗ್ಗೆ ಈ ವಚವ ಅವತರಿಸಿತು: **ಸುಮ್ಮ ಇನ್ನ ರಬ್ಬಕ ಲಿಲ್ಲಝೀನ ಹಾಜರೂ ಮಿಮ್ ಬಅದಿ ಮಾ ಫುತಿನೂ ಸುಮ್ಮ ಜಾಹದು ವ ಸಬರು ಇನ್ನ ರಬ್ಬಕ ಮಿಮ್ ಬಅದಿಹಾ ಲಗಫೂರುರ್ರಹೀಮ್**. (ಅನ್ನಹಲ್:111) (ಅಲ್ ಅಸಾಬ ಫೀ ತಮೀಝಿಸ್ಸಹಾಬ ಸಂಪುಟ–3, ಪುಟ–34, ದಾರುಲ್ ಫಿಕರ್ ಬೈರೂತ್ 2001)

ಮತ್ತೆ, ತಾವು ದೌರ್ಜನ್ಯಕ್ಕೊಳಗಾಗಿ (ತಮ್ಮ ಮನೆಗಳನ್ನು ತೊರೆದು) ವಲಸೆ ಹೋಗಿ, ಅನಂತರವೂ (ಅಲ್ಲಾಹನ ಮಾರ್ಗದಲ್ಲಿ) ಕಠಿಣವಾಗಿ ಶ್ರಮಪಟ್ಟು ಸಹನೆಯನ್ನು ಕೈಗೊಳ್ಳುವವರಿಗೆ, ಖಂಡಿತವಾಗಿಯೂ ಆ ಬಳಿಕ ನಿನ್ನ ಪ್ರಭು ಬಹಳವಾಗಿ ಕ್ಷಮಿಸುವವನೂ ಕರುಣೆದೋರುವವನೂ ಆಗಿದ್ದಾನೆ.

ಒಂದು ವರದಿಯ ಪ್ರಕಾರ ಮದೀನದ ಕಡೆ ಹಿಜ್ರತ್ ಮಾಡಿ ಕೊನೆಗೆ ಬರುವರಲ್ಲಿ ಹಝ್ರತ್ ಅಲಿ(ರ) ಮತ್ತು ಹಝ್ರತ್ ಸುಹೈಬ್ ಬಿನ್ ಸನಾನ್(ರ) ಆಗಿದ್ದರು. ಇದು ರಬೀಉಲ್ ಅವ್ವಲ್‌ನ ಘಟನೆಯಾಗಿದೆ. ಪ್ರವಾದಿ(ಸ) ಅವರು ಖುಬಾದಲ್ಲಿ ತಂಗಿದ್ದರು ಇನ್ನು ಮದೀನಕ್ಕೆ ತೆರಳಿರಲಿಲ್ಲ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಸಂಪುಟ–3, ಪುಟ–172, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017)

ಒಂದು ವರದಿ ಹೀಗಿದೆ ಹಝ್ರತ್ ಸುಹೈಬ್(ರ) ಹಿಜ್ರತ್ ಮಾಡುವುದಕ್ಕೆ ಮದೀನಕ್ಕೆ ಹೊರಟಾಗ ಮುಶ್ರಿಕ್‌ಗಳ ಒಂದು ತಂಡ ಅವರನ್ನು ಹಿಂಬಾಲಿಸಿದರು. ಆಗ ಅವರು ತಮ್ಮ ಸವಾರಿಯಿಂದ ಇಳಿದು ತಮ್ಮ ಬಾಣಗಳಿಡುವ ಕೋಶದಲ್ಲಿ ಇದ್ದದ್ದನ್ನೆಲ್ಲ ತೆಗೆದುಕೊಂಡು ಹೇಳಿದರು ಎಲೈ ಖುರೈಶರೆ!! ನಾನು ನಿಮ್ಮ ಪರಿಣಿತಿ ಹೊಂದಿರುವ ಬಿಲ್ಲುಗಾರರಲ್ಲಿ ಒಬ್ಬನಾಗಿದ್ದೇನೆ. ಅಲ್ಲಾಹನ ಆಣೆ! ನನ್ನಲ್ಲಿರುವ ಬಾಣಗಳನ್ನೆಲ್ಲ ಪ್ರಯೋಗ ಮಾಡುವ ತನಕ ನೀವು ನನ್ನ ಬಳಿ ತಲುಪಲು ಸಾಧ್ಯವಿಲ್ಲ. ತದನಂತರ ನಾನು ಖಡ್ಗ ಪ್ರಯೋಗ ಮಾಡುವೆನು. ಆದ್ದರಿಂದ ನೀವೆಲ್ಲರು ಏನು ಬಯಸುತ್ತೀರ ಎಂದು ಹೇಳಿರಿ ಒಂದು ವೇಳೆ ನೀವು ನನ್ನ ಸಂಪತ್ತನ್ನು ಬಯಸುತ್ತಿದ್ದೀರಿ ಎಂದಾದರೆ ನಾನು ನನ್ನ ಸಂಪತ್ತು ಎಲ್ಲಿದೆ ಎಂದು ಹೇಳುವೆನು ಆದರೆ ನನ್ನ ಮಾರ್ಗ ಬಿಟ್ಟುಬಿಡಿ. ಅವರೆಲ್ಲರು ಅದಕ್ಕೆ ಹೇಳಿದರು ಸರಿ. ಆಗ ಹಝ್ರತ್ ಸುಹೈಬ್(ರ) ತನ್ನ ಸಂಪತ್ತಿನ ಬಗ್ಗೆ ಹೇಳಿದರು, ತದನಂತರ ಹಝ್ರತ್ ಸುಹೈಬ್(ರ) ಪ್ರವಾದಿ(ಸ) ಅವರ ಬಳಿ ಬಂದು ತಿಳಿಸಿದರು ಆಗ ಪ್ರವಾದಿ(ಸ) ಹೇಳಿದರು ಈ ವ್ಯವಹಾರವೂ ಅಬೂ ಯಹ್ಯಾನಿಗೆ ಲಾಭ ತಲುಪಿಸಿತು. ವ್ಯವಹಾರವು ಲಾಭ ದಾಯಕವಾಯಿತು. ವರದಿಗಾಗರರು ಹೇಳುತ್ತಾರೆ ಈ ಸಂಬಂಧದಲ್ಲಿ ಈ ಆಯತ್ ಅವತೀರ್ಣವಾಯಿತು: **ವಮಿನನ್ನಾಸಿ ಮಯ್ಯಶ್ರಿ ನಫ್ಸಹುಬ್‌ತಿಗಾಅ ಮರ್‌ಝಾತಿಲ್ಲಾಹಿ ವಲ್ಲಾಹು ರೂಫುರ್ರಹೀಮ್**. **(ಅಲ್‌ಬಖರ: 208,** ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಸಂಪುಟ–3, ಪುಟ–171–172, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017)

ಜನರ ಪೈಕಿ ಅಲ್ಲಾಹನ ಪ್ರೀತಿಯನ್ನು ಗಳಿಸುವ ಆಕಾಂಕ್ಷೆಯಿಂದ ಆತ್ಮಾರ್ಪಣೆ ಮಾಡುವಂಥವನೂ ಇರುತ್ತಾನೆ. ಅಲ್ಲಾಹನು (ಅಂತಹ ತನ್ನ) ಭಕ್ತ ದಾಸರೊಡನೆ ಹೆಚ್ಚು ಕರುಣೆಯುಳ್ಳವನಾಗಿದ್ದಾನೆ.

ಒಂದು ವರದಿಯಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ ಹಝ್ರತ್ ಸುಹೈಬ್(ರ) ಮಕ್ಕದಿಂದ ಹಿಜ್ರತ್ ಮಾಡಿ ಪ್ರವಾದಿ ಮುಹಮ್ಮದ್(ಸ)ರ ಸನ್ನಿಧಿಯಲ್ಲಿ ಹಾಜರಾದರು. ಆಗ ಹುಝೂರ್(ಸ) ಅವರು ಖುಬಾದಲ್ಲಿದ್ದರು. ಹುಝೂರ್(ಸ) ಅವರೊಂದಿಗೆ ಹಝ್ರತ್ ಅಬೂಬಕ್ಕರ್(ರ) ಮತ್ತು ಹಝ್ರತ್ ಉಮರ್(ರ) ಇದ್ದರು. ಆ ಸಂದರ್ಭದಲ್ಲಿ ಅವರೆಲ್ಲರ ಮುಂದೆ ತಾಜ ಖರ್ಜೂರಗಳು ಇದ್ದವು ಅದನ್ನು ಉಮ್ಮೆ ಕುಲ್‌ಸೂಮ್ ಬಿನ್ ಹಝ್ಧಾಮ್(ರ) ರವರ ತಂದಿದ್ದರು. ರಸ್ತೆಯಲ್ಲಿ ಹಝ್ರತ್ ಸುಹೈಬ್(ರ)ರವರ ಕಣ್ಣುಗಳಲ್ಲಿ ತೊಂದರೆ ಉಂಟಾಗಿತ್ತು ಮತ್ತು ಅವರಿಗೆ ಬಹಳ ಹಸಿವೂ ಆಗಿತ್ತು. ಪ್ರವಾಸ ಮಾಡಿದ್ದರಿಂದ ಆಯಾಸಗೊಂಡಿದ್ದರು. ಹಝ್ರತ್ ಸುಹೈಬ್(ರ) ಖರ್ಜೂರಗಳನ್ನು ಸೇವಿಸಲು ಸರ್ರನೆ ಮುಂದಾದಾಗ ಹಝ್ರತ್ ಉಮರ್(ರ) ಹೇಳಿದರು ಯಾ ರಸೂಲಲ್ಲಾಹ್! ಸುಹೈಬ್‌ನ ಕಡೆ ನೋಡಿರಿ ಆತನಿಗೆ **ಆಶೂಬೆ ಚಶಮ್** (ಕಣ್ಣಿನ ಕಾಯಿಲೆ) ಇದೆ ಅವರು ಖರ್ಜೂರಗಳನ್ನು ಸೇವಿಸುತ್ತಿದ್ದಾರೆ. ಪ್ರವಾದಿ ಮುಹಮ್ಮದ್(ಸ) ತಮಾಶೆಗಾಗಿ ಹೇಳಿದರು ನಿಮಗೆ ಆಶೂಬೆ ಚಶಮ್ ಆಗಿದ್ದೂ ನೀವು ಖರ್ಜೂರಗಳನ್ನು ಸೇವಿಸುತ್ತಿದ್ದೀರ. ಕಣ್ಣುಗಳು ಊದಿ ಹೋಗಿವೆ, ಕಣ್ಣಿನಿಂದ ನೀರು ಹೋಗುತ್ತಿದೆ. ಹಝ್ರತ್ ಸುಹೈಬ್(ರ) ಹೇಳಿದರು: ನಾನು ಉತ್ತಮವಾಗಿರುವ ಈ ಕಣ್ಣಿನ ಭಾಗದಿಂದ ಸೇವಿಸುತ್ತಿರುವುದು. ಇದಕ್ಕೆ ರಸೂಲುಲ್ಲಾಹ್(ಸ) ಮುಗುಳುನಗೆ ನಕ್ಕರು. ಮತ್ತೆ ಹಝ್ರತ್ ಸುಹೈಬ್(ರ) ಹಝ್ರತ್ ಅಬೂಬಕ್ಕರ್(ರ) ಅವರನ್ನು ಉದ್ದೇಶಿಸಿ ಹೇಳಿದರು ನೀವು ನನ್ನೊಂದಿಗೆ ವಾಗ್ದಾನ ಮಾಡಿದ್ದೀರಿ ನೀವು ನನ್ನನ್ನು ನಿಮ್ಮೊಂದಿಗೆ ಹಿಜ್ರತ್‌ನಲ್ಲಿ ಜೊತೆಗೆ ಕರೆದುಕೊಂಡು ಹೋಗುವಿರಿ ಎಂದು ಆದರೆ ನೀವು ನನ್ನನ್ನು ಬಿಟ್ಟು ಬಂದಿದ್ದೀರಿ. ಮತ್ತೆ ಅವರು ರಸೂಲುಲ್ಲಾಹ್(ಸ) ಅವರಿಗೆ ಹೇಳಿದರು: ಯಾ ರಸೂಲಲ್ಲಾಹ್!! ನೀವು ನನ್ನನ್ನು ನಿಮ್ಮೊಂದಿಗೆ ಕರೆದುಕೊಂಡು ಹೋಗುವೆ

ಎಂದು ಹೇಳಿದ್ದೀರಿ ಆದರೆ ನೀವು ಸಹ ನನಗೆ ಬಿಟ್ಟು ಬಂದಿದ್ದೀರಿ. ಖುರೈಶರು ನನಗೆ ಹಿಡಿದುಕೊಂಡು ಸೆರೆಯಾಳು ಮಾಡಿದ್ದರು. ನಾನು ನನ್ನ ಜೀವ ಮತ್ತು ನನ್ನ ಕುಟುಂಬದವರನ್ನು ನನ್ನ ಸಂಪತ್ತಿನ ಬದಲು ಪಡೆದಿದ್ದೇನೆ. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಹೇಳಿದರು: ಈ ವ್ಯಾಪಾರವೇ ಲಾಭದಾಯಕವಾಯಿತು. ಈ ಸಂಬಂಧ ಅಲ್ಲಾಹನು ಈ ವಚನವನ್ನು ಅವತರಿಸಿದನು: **ವಮಿನನ್ನಾಸಿ ಮಯ್ಯಶ್ರಿ ನಫ್ಸಹುಬ್‌ತಿಗಾಅ ಮರ್‌ಝಾತಿಲ್ಲಾಹಿ ವಲ್ಲಾಹು ರೂಫುರ್‍ರಹೀಮ್. (ಅಲ್‌ಬಖರ: 208)**

ಜನರ ಪೈಕಿ ಅಲ್ಲಾಹನ ಪ್ರೀತಿಯನ್ನು ಗಳಿಸುವ ಆಕಾಂಕ್ಷೆಯಿಂದ ಆತ್ಮಾರ್ಪಣೆ ಮಾಡುವಂಥವನೂ ಇರುತ್ತಾನೆ. ಅಲ್ಲಾಹನು (ಅಂತಹ ತನ್ನ) ಭಕ್ತ ದಾಸರೊಡನೆ ಹೆಚ್ಚು ಕರುಣೆ ಉಳ್ಳವನಾಗಿದ್ದಾನೆ. ಹಝ್ರತ್ ಸುಹೈಬ್(ರ) ಹೇಳಿದರು ಯಾ ರಸೂಲಲ್ಲಾಹ್! ನಾನು ಸುಮಾರು ಒಂದು ಮುದ್ದು, ಅಂದರೆ ಸುಮಾರು ಅರ್ಧ ಕೆ.ಜಿ ಹಿಟ್ಟು ರಸ್ತೆ ಖರ್ಚಿಗಾಗಿ ಎಂದು ಪಡೆದಿದ್ದೆ. ಅದನ್ನು ನಾನು ಅಬವಾ ಎಂಬ ಸ್ಥಳದಲ್ಲಿ ತಯಾರಿಸಿ ಪ್ರವಾದಿ(ಸ) ಅವರ ಸನ್ನಿಧಿಯಲ್ಲಿ ಹಾಜರಾದೆನು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಸಂಪುಟ–3, ಪುಟ–172, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017)

ಈ ಪ್ರವಾಸದಲ್ಲಿ ಇಷ್ಟನ್ನು ಮಾತ್ರ ಸೇವಿಸಿದೆನು. ಹಝ್ರತ್ ಮುಸ್ಲಿಹ್ ಮೌಊದ್(ರ) ಇದರ ಬಗ್ಗೆ ಹೇಳುತ್ತಾರೆ: "ಸುಹೈಬ್(ರ) ಓರ್ವ ಶ್ರೀಮಂತ ವ್ಯಕ್ತಿ ಆಗಿದ್ದರು. ಇವರು ವ್ಯಾಪಾರಸ್ಥರಾಗಿದ್ದರು. ಮಕ್ಕದ ಗಣ್ಯ ವ್ಯಕ್ತಿಗಳಲ್ಲಿ ಪರಿಗಣಿಸಲಾಗುತ್ತಿತ್ತು. ಆದರೂ ಅವರು ಶ್ರೀಮಂತ ವ್ಯಕ್ತಿ ಆಗಿ ಸ್ವತಂತ್ರತೆಯನ್ನು ಹೊಂದಿದ್ದರೂ ಸಹ ಖುರೈಶರು ಅವರಿಗೆ ಹೊಡೆದು ಪ್ರಜ್ಞೆ ತಪ್ಪಿಸುತ್ತಿದ್ದರು. ರಸೂಲುಲ್ಲಾಹ್(ಸ) ಅವರು ಮದೀನಕ್ಕೆ ಹಿಜ್ರತ್ ಮಾಡಿದಾಗ ರಸೂಲುಲ್ಲಾಹ್(ಸ) ಅವರ ನಂತರ ಸುಹೈಬ್(ರ) ಸಹ ಹಿಜ್ರತ್ ಮಾಡಿ ಮದೀನಕ್ಕೆ ಹೋಗಬೇಕೆಂದು ಬಯಸಿದ್ದರು ಆದರೆ ಮಕ್ಕದ ಜನರು ಅವರನ್ನು ತಡೆದು ಹೇಳಿದರು ನೀವು ಮಕ್ಕದಲ್ಲಿ ಸಂಪಾದಿಸಿರುವ ಎಲ್ಲಾ ಸಂಪತ್ತನ್ನು ಮಕ್ಕದಿಂದ ಹೊರಗೆ ಹೇಗೆ ತೆಗೆದುಕೊಂಡು ಹೋಗುವಿರಿ? ನಾವು ನಿಮಗೆ ಮಕ್ಕದಿಂದ ಹೊರಗೆ ಹೋಗಲು ಅನುಮತಿ ನೀಡುವುದಿಲ್ಲ. ಸುಹೈಬ್ ಹೇಳಿದರು: ನಾನು ಈ ಎಲ್ಲಾ ಸಂಪಾದಿಸಿರುವ ಸಂಪತ್ತನ್ನು ಇಲ್ಲಿಯೇ ಬಿಟ್ಟರೆ ನೀವು ನನಗೆ ಹೋಗಲು ಅನುಮತಿ ನೀಡುವಿರಾ? ಅವರೆಲ್ಲರು ಈ ಮಾತನ್ನು ಒಪ್ಪಿದಾಗ ಸುಹೈಬ್(ರ) ತಮ್ಮ ಎಲ್ಲಾ ಸಂಪತ್ತನ್ನು ಮಕ್ಕದವರಿಗೆ ನೀಡಿ ಬರಿಗೈಯಲ್ಲಿ ಮದೀನಕ್ಕೆ ತಲುಪಿ ರಸುಲುಲ್ಲಾ(ಸ) ಅವರ ಬಳಿಗೆ ಹೋದರು. ಆಗ ರಸೂಲುಲ್ಲಾಹ್(ಸ) ಹೇಳಿದರು: ನಿಮ್ಮ ಈ ವ್ಯಾಪಾರ ಹಿಂದೆ ಮಾಡಿದ ಎಲ್ಲಾ ವ್ಯಾಪಾರಕ್ಕಿಂತ ಹೆಚ್ಚು ಲಾಭಕರವಾಗಿದೆ. ಅಂದರೆ ಮೊದಲು ನೀವು ವ್ಯಾಪಾರದಲ್ಲಿ ಹಣ ಗಳಿಸುತ್ತಿದ್ದೀರಿ ಆದರೆ ಈಗ ಈಮಾನ್ (ಸತ್ಯವಿಶ್ವಾಸ ) ಗಳಿಸಿದ್ದೀರಿ."
(ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್ ಸಂಪುಟ–20, ಪುಟ–194–195)

ಪ್ರವಾದಿ ಸಲ್ಲಲ್ಲಹು ಅಲೈಹಿವಸಲ್ಲಮರು ಹಝ್ರತ್ ಸುಹೈಬ್(ರ) ರವರು ಮಕ್ಕದಿಂದ ಮದೀನಕ್ಕೆ ಹಿಜ್ರತ್ ಮಾಡಿದ ನಂತರ ಅವರ ಹಾಗೂ ಹಝ್ರತ್ ಹಾರಿಸ್ ಬಿನ್ ಸಿಮ್ಮ(ರ) ಅವರೊಂದಿಗೆ ಸಹೋದರ ಸಂಬಂಧ ಸ್ಥಾಪಿಸಿದರು. ಹಝ್ರತ್ ಸುಹೈಬ್(ರ) ಬದರ್, ಉಹುದ್, ಖಂದಖ್, ಇನ್ನುಳಿದ ಎಲ್ಲಾ ಯುದ್ಧಗಳಲ್ಲಿ ರಸೂಲುಲ್ಲಾಹ್(ಸ) ಅವರೊಂದಿಗೆ ಭಾಗವಹಿಸಿದರು. (ಉಸದುಲ್ ಗಾಬ ಸಂಪುಟ–3, ಪುಟ–39, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2016)

ಹಝ್ರತ್ ಆಯಿಝ್ ಬಿನ್ ಉಮರ್(ರ) ಅವರಿಂದ ವರದಿ ಆಗಿದೆ ಹಝ್ರತ್ ಸಲ್ಮಾನ್(ರ). ಹಝ್ರತ್ ಸುಹೈಬ್(ರ) ಮತ್ತು ಹಝ್ರತ್ ಬಿಲಾಲ್(ರ) ಜನರ ಮಧ್ಯೆ ಕುಳಿತುಕೊಂಡಿರುವಾಗ ಅವರ ಸಮೀಪದಿಂದ ಅಬೂಸುಫಿಯಾನ್ ಬಿನ್ ಹರಬ್ ಹೋದನು. ಜನರು ಹೇಳಿದರು ಅಲ್ಲಾಹನ ಖಡ್ಗಗಳು ವೈರಿಗಳ ಮೇಲೆ ಪ್ರಯೋಗವಾಗಲಿಲ್ಲ. ಇದಕ್ಕೆ ಹಝ್ರತ್ ಅಬೂಬಕ್ಕರ್(ರ) ಹೇಳಿದರು: ಏನು ನೀವು ಖುರೈಶಿನ ನಾಯಕನ ಬಗ್ಗೆ ಹೀಗೆ ಹೇಳುತ್ತಿದ್ದೀರಾ? ಈ ಮಾತು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ತಿಳಿಸಿದಾಗ ಹುಝೂರ್(ಸ) ಹಝ್ರತ್ ಅಬೂಬಕ್ಕರ್(ರ) ಉದ್ದೇಶಿಸಿ ಹೇಳಿದರು: ಎಲೈ ಅಬೂಬಕ್ಕರ್! ನೀವು ಅವರು ಆವೇಶಕ್ಕೆ ಬರುವಂತೆ ಮಾಡಿದ್ದೀರಿ. ಒಂದು ವೇಳೆ ನೀವು ಅವರನ್ನು ಆವೇಶಭರಿತರಾಗುವಂತೆ ಮಾಡಿದರೆ ನೀವು ಅಲ್ಲಾಹನನ್ನು ಸಹ ಆವೇಶ ತರೆಸಿದ್ದೀರಿ. ಅನಂತರ ಹಝ್ರತ್ ಅಬೂಬಕ್ಕರ್(ರ) ಜನರ ಬಳಿ ಹೋಗಿ ಹೇಳಿದರು ಓ ನನ್ನ ಸಹೋದರರೇ! ನೀವು ಕೊಪಗೊಂಡಿರಬಹುದು. ಅವರೆಲ್ಲರು ಹೇಳಿದರು ಇಲ್ಲ ಅಬೂಬಕ್ಕರ್! ಅಲ್ಲಾಹನು ನಿಮ್ಮನ್ನು ಕರುಣಿಸಲಿ. (ಮಸ್ನದ್ ಅಹ್ಮದ್ ಬಿನ್ ಹಂಬಲ್ ಸಂಪುಟ–6, ಪುಟ–885, ಆಲಿಮುಲ್ ಕುತುಬ್ ಬೈರೂತ್ 1998)

ಹಝ್ರತ್ ಸುಹೈಬ್ ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಾವುದೆಲ್ಲಾ ಯುದ್ಧದಲ್ಲಿ ಭಾಗವಹಿಸಿದರೋ ಅವುಗಳಲ್ಲಿ ನಾನು ಸಹ ಭಾಗವಹಿಸಿದೆ. ಅವರು ಯಾವಾಗಲೆಲ್ಲಾ ಬೈಅತ್ ಪಡೆದುಕೊಂಡರೋ ಆ ಸಂದರ್ಭಗಳಲ್ಲಿ ನಾನು ಉಪಸ್ಥಿತನದ್ದೆ. ಅವರು ಯಾವಾಗಲೆಲ್ಲಾ ಯುದ್ಧಕ್ಕೆ ಸೈನ್ಯವನ್ನು ಕಳುಹಿಸಿದರೋ ನಾನು ಅವುಗಳಲ್ಲಿ ಸೇರಿದ್ದೆ. ಅವರು ಯಾವ ಯುದ್ಧಗಳಿಗೆ ಹೊರಟರೋ ಅವರ ಜೊತೆಗೆ ನಾನು ಸಹ ಇದ್ದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನನ್ನ ಮತ್ತು ಶತ್ರುಗಳ ಮಧ್ಯೆ ಆಗುವಂತಾಗಲು ನಾನು ಎಂದೂ ಬಿಡಲಿಲ್ಲ – ಅವರು ನಿಧನ ಹೊಂದುವ ತನಕ. ಅಂದರೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ನಿಧನ ಹೊಂದುವ ತನಕ. (ಅಲ್‌ಅಸಾಬ ಫೀ ತಮೀಝಿಸ್ಸಹಾಬ ಸಂಪುಟ–3, ಪುಟ–35, ದಾರುಲ್ ಫಿಕರ್ ಬೈರೂತ್ 2001)

ಹಝ್ರತ್ ಸುಹೈಬ್ ವೃದ್ಧರಾದಾಗ ಜನರನ್ನು ಜಮಾಯಿಸಿ ಅತ್ಯಂತ ರೋಚಕವಾಗಿ ಯುದ್ಧದ ಕೌಶಲಗಳನ್ನು ವಿವರಿಸುತ್ತಿದ್ದರು. (ಸೈರುಸ್ಸಹಾಬ ಸಂಪುಟ–2, ಪುಟ–268, ಮಕ್ತಬ ದಾರುಲ್ ಇಶಾಅತ್ ಉರ್ದು ಬಾಝಾರ್ ಕರಾಚಿ)

ಹಝ್ರತ್ ಸುಹೈಬ್(ರ) ರವರ ಭಾಷೆಯಲ್ಲಿ ಅಜಮೀಯ್ಯತ್ (ಅರಬ್ ದೇಶವನ್ನುಳಿದು ಅನ್ಯ ದೇಶದವರು) ಇತ್ತು ಅಂದರೆ ಅರಬ್ ದೇಶದವರ ಹಾಗೆ ಭಾಷೆಯಲ್ಲಿ ಸ್ಪಷ್ಟತೆ ಇರಲಿಲ್ಲ. ಝೈದ್ ಬಿನ್ ಅಸ್ಲಮ್ ತಮ್ಮ ತಂದೆಯಿಂದ ವರದಿ ಮಾಡುತ್ತಾರೆ ನಾನು ಹಝ್ರತ್ ಉಮರ್(ರ) ಅವರೊಂದಿಗೆ ಹಝ್ರತ್ ಸುಹೈಬ್(ರ) ಅವರ ತೋಟಕ್ಕೆ ಹೋದೆವು ಅದು ಆಲಿಯಾ ಎಂಬಲ್ಲಿತ್ತು. ಹಝ್ರತ್ ಸುಹೈಬ್(ರ) ಹಝ್ರತ್ ಉಮರ್(ರ) ಅವರನ್ನು ನೋಡಿದಾಗ ಯನ್ನಾಸ್ ಯನ್ನಾಸ್ ಎಂದು ಹೇಳಿದರು. ಹಝ್ರತ್ ಉಮರ್(ರ) ಅವರಿಗೆ ಇವರು ಅನ್ನಾಸ್ ಅನ್ನಸ್ ಎಂದು ಹೇಳುತ್ತಿರುವುದು ಎಂದು ಭಾಸವಾಯಿತು ಆಗ ಅವರು ಹೇಳಿದರು ಸುಹೈಬ್‌ಗೆ ಏನಾಗಿದೆ ಇವರು ಜನರಿಗೆ ಏಕೆ ಕರೆಯುತ್ತಿದ್ದಾನೆ? ಎಂದರು. ವರದಿಗಾರರು ಹೇಳುತ್ತಾರೆ ನಾನು ಹೇಳಿದೆ ಆತನು ತನ್ನ ಗುಲಾಮನಾದ ಯುಹನ್ನಾಸ್‌ನನ್ನು ಕರೆಯುತ್ತಿರುವುದು ಎಂದು. ಭಾಷೆಯಲ್ಲಿ ಗಂಡು ಇಲ್ಲದ ಕಾರಣ ಅವರು ಹೀಗೆ ಹೇಳುತ್ತಿರುವುದು. ತದ ನಂತರ ಅಲ್ಲಿ ಮಾತುಕತೆ ನಡೆಯಿತು. ಆಗ ಹಝ್ರತ್ ಉಮರ್(ರ) ಹೇಳಿದರೆ ಎಲೈ ಸುಹೈಬ್! ನಾನು ನಿಮ್ಮಲ್ಲಿ ಮೂರು ಮಾತುಗಳಲ್ಲದೆ ಯಾವ ಕೊರತೆಯು ಕಾಣುವುದಿಲ್ಲ. ಆ ಕೊರತೆಗಳು ನಿಮ್ಮಲ್ಲಿ ಇರಲಿಲ್ಲವಾರೆ ನಾನು ನಿಮ್ಮ ಮೇಲೆ ಯಾರನ್ನು ಶ್ರೇಷ್ಠತೆ ನೀಡುತ್ತಿರಲಿಲ್ಲ. ನಾನು ನೋಡುವುದೇನಂದರೆ ನೀವು ನಿಮ್ಮನ್ನು ಅರಬರ ಕಡೆ ಪರಿಗಣಿಸುತ್ತೀರಿ ಆದರೆ ನೀವು ಅಜಮಿ ಅಗಿದ್ದಿರಿ. ಮತ್ತೆ ನೀವು ತಮ್ಮನ್ನು ಅಬೂ ಯಹ್ಯ ಎಂದು ಹೇಳುತ್ತೀರಿ ಅದು ಓರ್ವ ಪ್ರವಾದಿಯ ಹೆಸರಾಗಿದೆ. ಮತ್ತು ನೀವು ನಿಮ್ಮ ಸಂಪತ್ತನ್ನು ದುಂದು ವೆಚ್ಚ ಮಡುತ್ತೀರಿ. ಹಝ್ರತ್ ಸುಹೈಬ್ ಉತ್ತರಿಸಿದರು: ನನ್ನ ಸಂಪತ್ತನ್ನು ದುಂದು ವೆಚ್ಚದ ಪ್ರಶ್ನೆ ಎಲ್ಲಿದೆ. ನಾನು ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿಯೇ ಖರ್ಚು ಮಾಡುವುದು ದುಂದು ವ್ಯಚ್ಚ ಮಾಡುವುದಿಲ್ಲ. ನನ್ನ ಉಪನಾಮದ ಪ್ರಶ್ನೆ ಇದೆ ಇದರ ಬಗ್ಗೆ ಹೇಳುತ್ತೇನೆ ಇದು ಪ್ರವಾದಿ(ಸ) ಅವರು ಅಬೂಯಹ್ಯ ಎಂದು ಇರಿಸಿದ್ದರು ಅದನ್ನು ನಾನು ಎಂದೂ ತ್ಯಜಿಸುವುದಿಲ್ಲ. ಮತ್ತು ನಾನು ಅರಬರ ಕಡೆ ಪರಿಗಣಿಸುವ ಪ್ರಶ್ನೆಗೆ ನಾನು ಹೇಳುವುದೇನೆಂದರೆ ನನಗೆ ಬಾಲ್ಯವಸ್ಥೆಯಲ್ಲಿಯೇ ನನಗೆ ರೂಮಿಗಳು ಸೆರೆ ಹಿಡಿದಿದ್ದರು ಆದ್ದರಿಂದ ನಾನು ಅವರ ಭಾಷೆ ಕಲಿತಿರುವುದು. ನಾನು ನಮಿರ್ ಬಿನ್ ಖಾಸಿತ್ ಗೋತ್ರಕ್ಕೆ ಸೇರಿರುವೆ.

ಹಝ್ರತ್ ಉಮರ್(ರ) ಹಝ್ರತ್ ಸುಹೈಬರನ್ನು(ರ) ಬಹಳ ಪ್ರೀತಿಸುತ್ತಿದ್ದರು ಮತ್ತು ಅವರ ಬಗ್ಗೆ ಬಹಳ ಆದರ ಭಾವವನ್ನು ಹೊಂದಿದ್ದರು. ಹಝ್ರತ್ ಉಮರ್(ರ) ಗಾಯಗೊಂಡಾಗ ಹೀಗೆ ವಸಿಯ್ಯತ್ ಮಾಡಿದರು: ಹಝ್ರತ್ ಸುಹೈಬ್ ನನ್ನ ಜನಾಝು ನಮಾಝ್ ನಿರ್ವಹಿಸಲಿ. ಮೂರು ದಿನಗಳ ತನಕ ಮುಸ್ಲಿಮರ ಇಮಾಮ್ ಆಗಿ ಕಾರ್ಯ ನಿರ್ವಹಿಸಲಿ. ಅಷ್ಟರೊಳಗೆ ಶೂರಾದ ಸದಸ್ಯರು ಮುಂದಿನ ಖಲೀಫರು ಯಾರಾಗಬೇಕೆಂದು ನಿರ್ಧರಿಸಲಿ.

ಹಝ್ರತ್ ಸುಹೈಬ್ ಹಿಜರಿ 38ರ ಶವ್ವಾಲ್ ತಿಂಗಳಲ್ಲಿ ನಿಧನ ಹೊಂದಿದರು. ಬೇರೆ ಕೆಲವರು ಹಿಜರಿ 39ರಲ್ಲಿ ಅವರು ನಿಧನ ಹೊಂದಿದರೆಂದು ಹೇಳುತ್ತಾರೆ. ಅವರು ಮೃತರಾಗುವಾಗ ಅವರ ಪ್ರಾಯ 73 ಆಗಿತ್ತು. ಬೇರೆ ಕೆಲವರ ಅಭಿಪ್ರಾಯ ಪ್ರಕಾರ ಅವರು 70ನೇ ವಯಸ್ಸಿನಲ್ಲಿ ನಿಧನ ಹೊಂದಿದರು. ಅವರನ್ನು ಮದೀನದಲ್ಲಿ ದಫನ್ ಮಾಡಲಾಯಿತು. (ಉಸದುಲ್ ಗಾಬ ಸಂಪುಟ–3, ಪುಟ–41, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2016)

ನಾನು ವಿವರಿಸಲಿರುವ ಇನ್ನೊಬ್ಬ ಸಹಾಬಿಯ ಹೆಸರು ಹಝ್ರತ್ ಸಅದ್ ಬಿನ್ ರಬೀಅ್(ರ). ಅವರು ಅನ್ಸಾರರ ಖಝ್‌ರಜ್ ಗೋತ್ರಕ್ಕೆ ಸೇರಿದ್ದರು. ಅವರ ತಂದೆ ರಬೀಅ್ ಬಿನ್ ಅಮರ್ ಆಗಿದ್ದರು ಮತ್ತು ತಾಯಿಯ ಹೆಸರು

ಹಝೀಲ ಬಿನ್ತ್ ಇನಬ ಎಂದಾಗಿತ್ತು. ಹಝ್ರತ್ ಸಅದ್(ರ) ರವರಿಗೆ ಇಬ್ಬರು ಪತ್ನಿಯರಿದ್ದರು. ಒಬ್ಬರ ಹೆಸರು ಅಮ್ರ ಬಿನ್ತ್ ಹಝುಮ್ ಎಂದಾಗಿತ್ತು ಇನ್ನೊಬ್ಬರ ಹೆಸರು ಹಬೀಬ ಬಿನ್ತ್ ಝುಯದ್ ಎಂದಾಗಿತ್ತು. ಸಅದ್ ಬಿನ್ ರಬೀಅ್(ರ) ರವರಿಗೆ ಇಬ್ಬರು ಪುತ್ರಿಯರಿದ್ದರು ಅವರಲ್ಲಿ ಒಬ್ಬರು ಉಮ್ಮೆ ಸಅದ್ ಅವರಾಗಿದ್ದರು ಅವರ ಮೂಲ ಹೆಸರು ಜಮೀಲ ಎಂದಾಗಿತ್ತು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಸಂಪುಟ–3, ಪುಟ–395, ಸಂಪುಟ–8, ಪುಟ–303, ಉಮ್ಮೆ ಅಮ್ಮಾರ, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017, ಉಮ್ದತುಲ್ ಖಾರಿ ಸಂಪುಟ–20, ಪುಟ–216, ದಾರ್ ಅಹ್ಯಉತ್ತುರಾಸುಲ್ ಅರಬಿ ಬೈರೂತ್ 2003)

ಸಅದ್ ಬಿನ್ ರಬೀಅ್(ರ) ಅಜ್ಞಾನ ಕಾಲದಲ್ಲಿಯೂ ಓದು ಬರಹ ಕಲಿತಿದ್ದರು. ಅವರು ಬನೂ ಹಾರಿಸ್ ಗೋತ್ರದ ನಖೀಬ್ ಆಗಿದ್ದರು. ಅವರೊಂದಿಗೆ ಅಬ್ದುಲ್ಲಾ ಬಿನ್ ರವಾಹ(ರ) ಸಹ ಈ ಗೋತ್ರದಲ್ಲಿ ನಖೀಬ್ ಆಗಿದ್ದರು. ಅವರು ಬೈಅತೆ ಅಖಬ ಊಲಾ ಮತ್ತು ಸಾನಿಯದಲ್ಲಿ ಭಾಗವಹಿಸಿದ್ದರು. (ಉಸದುಲ್‌ಗಾಬ, ಸಂಪುಟ–2, ಪುಟ–214, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2016)

ಮದೀನದ ಹಿಜ್ರತ್ ಸಂದರ್ಭದಲ್ಲಿ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ಹಝ್ರತ್ ಸಅದ್(ರ) ಮತ್ತು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ)ರವರ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದರು. ಸಹೀಹ್ ಬುಖಾರಿಯ ವರದಿ ಹೀಗಿದೆ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ವರದಿ ಮಾಡುತ್ತಾರೆ: ನಾವು ಮದೀನಕ್ಕೆ ಆಗಮಿಸಿದಾಗ ರಸೂಲುಲ್ಲಾಹ್(ಸ) ರು ನನ್ನ ಹಾಗೂ ಸಅದ್ ಬಿನ್ ರಬೀಅ್(ರ) ರವರ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದರು. ಆಗ ಸಅದ್ ಬಿನ್ ರಬೀಅ್(ರ) ಹೇಳಿದರು ನಾನು ಅನ್ಸಾರ್‌ಗಳಲ್ಲಿ ಹೆಚ್ಚು ಶ್ರೀಮಂತನಾಗಿದ್ದೇನೆ. ಆದ್ದರಿಂದ ನನ್ನ ಸಂಪತ್ತಿನ ಅರ್ಧ ಭಾಗ ನಿಮಗೆ ನೀಡುತ್ತೇನೆ ಮತ್ತು ನನ್ನ ಇಬ್ಬರು ಪತ್ನಿಯರಲ್ಲಿ ನಿಮಗೆ ಯಾರಾದರು ಇಷ್ಟವಿದ್ದಲ್ಲಿ ಆಕೆಯನ್ನು ನಿಮಗಾಗಿ ತ್ಯಜಿಸುವೆನು ಎಂದರು. ಅವರ ಇದ್ದತ್ ಕಾಲ ಮುಗಿದ ನಂತರ ನೀವು ಅಕೆಯೊಂದಿಗೆ ವಿವಾಹ ಆಗಬಹುದು. ಅಗ ಅವರು ಹೇಳಿದರು ಇದರ ಅವಶ್ಯಕತೆ ಇಲ್ಲ. ನೀವು ನನಗೆ ಕೇವಲ ಇಲ್ಲಿ ವ್ಯಾಪಾರ ಮಾಡಲು ಮಾರುಕಟ್ಟೆ ಇದೆಯೇ ಎಂದು ಹೇಳಿರಿ. ಅದಕ್ಕೆ ಹಝ್ರತ್ ಸಅದ್ ಹೇಳಿದರು ಇಲ್ಲಿ ಖೈನಖಾದವರ ಮಾರುಕಟ್ಟೆ ಇದೆ ಎಂದರು. ಹಝ್ರತ್ ಅಬ್ದುರ‍್ರಮಾನ್ ಮುಂಜಾನೆ ಅಲ್ಲಿಗೆ ಹೋಗಿ ಪನೀರ್ ಮತ್ತು ತುಪ್ಪ ತಂದರು. ಅದೇ ರೀತಿ ದಿನಾಲು ಅಲ್ಲಿಗೆ ಹೋಗುತ್ತಿದ್ದರು. ಕೆಲವೆ ದಿನಗಳಾಗಿತ್ತು ಹಝ್ರತ್ ಅಬ್ದುರ್ರಹ್ಮನ್ ಬಂದಾಗ ಅವರ ಮೇಲೆ ಕೇಸರಿ ಬಣ್ಣವಿತ್ತು. ಆಗ ಪ್ರವಾದಿ(ಸ) ಇದರ ಬಗ್ಗೆ ಪ್ರಶ್ನಿಸಿದಾಗ ಅವರು ಹೇಳಿದರು ನಾನು ವಿವಾಹವಾಗಿದ್ದೇನೆ. ಅದಕ್ಕೆ ರಸೂಲುಲ್ಲಾ ಸಲ್ಲಲ್ಲಾಹು ಅಲೈಹಿವಸಲ್ಲಮ್ ಕೇಳಿದರು ಯಾರೊಂದಿಗೆ? ಅವರು ಉತ್ತರಿಸಿದರು ಅನ್ಸಾರ್‌ನ ಓರ್ವ ಮಹಿಳೆಯೊಂದಿಗೆ ಇದಕ್ಕೆ ಮತ್ತು ಹುಝೂರ್(ಸ) ಕೇಳಿದರು ಮಹರ್ ಎಷ್ಟು ನೀಡಿದ್ದೀರಿ? ಆಗ ಅವರು ಉತ್ತರಿಸಿದರು ಖರ್ಜೂರದ ಒಂದು ಬೀಜದಷ್ಟು ಚಿನ್ನ ನೀಡಿರುವೆನು ಎಂದು. ಅದಕ್ಕೆ ಮತ್ತು ರಸೂಲುಲ್ಲಾಹ್(ಸ) ಹೇಳಿದರು: ಈಗ ವಲೀಮ ನೀಡಿರಿ ಒಂದು ಆಡು ಆದರೂ ಸರಿ. (ಸಹೀಹ್ ಬುಖಾರಿ ಕಿತಾಬುಲ್ ಬುಯೂ, ಹದೀಸ್–2048)

ಅವರ ಯೋಗ್ಯತೆಗೆ ಅನುಸಾರ ವಲೀಮದ ಔತಣ ನೀಡಲು ಉಪದೇಶಿಸಿದರು. ಸಅದ್ ಬಿನ್ ರಬೀಅ್(ರ) ಬದರ್ ಮತ್ತು ಉಹುದ್ ಯುದ್ಧದಲ್ಲಿ ಭಾಗವಹಿಸಿದರು. ಉಹುದ್ ಯುದ್ಧದಲ್ಲಿ ಶಹೀದ್ ಆದರು. ಉಹುದ್ ಯುದ್ಧದ ದಿವಸ ರಸೂಲುಲ್ಲಾಹ್(ಸ) ಹೇಳಿದರು: ನನ್ನ ಬಳಿ ಸಅದ್ ಬಿನ್ ರಬೀಅ್(ರ) ರವರ ಸಮಾಚಾರ ಯಾರು ತರುವರು? ಒಬ್ಬ ವ್ಯಕ್ತಿ ಹೇಳಿದನು ನಾನು. ಹೀಗೆ ಆತನು ಕೊಲೆಗೈದವರ ಕಡೆ ಹೋಗಿ ಹುಡುಕಾಡಿದನು. ಸಅದ್ ಬಿನ್ ರಬೀಅ್(ರ) ರವರು ಆತನನ್ನು ಕಂಡು ನೀನು ಯಾರು ಎಂದು ವಿಚಾರಿಸಿದಾಗ. ಆತನು ಹೇಳಿದನು ನನಗೆ ಪ್ರವಾದಿ(ಸ) ಅವರು ನಿಮ್ಮ ಬಗ್ಗೆ ಸಮಾಚಾರವನ್ನು ಪಡೆಯುವುದಕ್ಕೆ ಕಳುಹಿಸಿದ್ದಾರೆ ಎಂದು. ಆಗ ಸಅದ್ ಬಿನ್ ರಬೀಅ್(ರ) ಹೇಳಿದರು ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಬಳಿ ಹೊದಾಗ ಅವರಿಗೆ ನನ್ನ ಸಲಾಮ್ ತಲುಪಿಸಿರಿ ಮತ್ತು ನನಗೆ ಬರ್ಚಿಯ ಹನ್ನೆರಡು ಗಾಯಗಳಾಗಿವೆ ಮತ್ತು ನನ್ನೊಂದಿಗೆ ಯುದ್ಧವಾಡುವವರೆಲ್ಲರು ನರಕ ತಲುಪಿದ್ದಾರೆ ಎಂದು ಹೇಳಿರಿ. ಮತ್ತು ನನ್ನ ಖೌಮಿನವರಿಗೆ ತಿಳಿಸಿರಿ ಅಲ್ಲಾಹನ ಮುಂದೆ ನಿಮ್ಮ ಬಳಿ ಯಾವ ನೆಪವೂ ಇರುವುದಿಲ್ಲ ಒಂದು ವೇಳೆ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ಶಹೀದರಾದರೆ ನಿಮ್ಮಲ್ಲಿ ಒಬ್ಬರಾದರು ಉಳಿದಿದ್ದರೆ. ಹೇಳಲಾಗುತ್ತದೆ ಅವರ ಬಳಿ ಹೋದವರು ಹಝ್ರತ್ ಉಬೈ ಬಿನ್ ಕಅಬ್ ಆಗಿದ್ದರು. ಹಝ್ರತ್ ಸಅದ್ ಬಿನ್ ರಬೀಅ್(ರ) ಹಝ್ರತ್ ಉಬೈ ಬಿನ್ ಕಅಬ್(ರ) ಅವರಿಗೆ ಹೇಳಿದರು: ನನ್ನ ಖೌಮಿನವರಿಗೆ ಹೇಳಿರಿ ಸಅದ್ ಬಿನ್ ರಬೀಅ್(ರ) ನಿಮಗೆ ತಿಳಿಸುವುದೇನೆಂದರೆ ಅಲ್ಲಾಹನಿಂದ ಭಯಭೀತರಾಗಿರಿ ಮತ್ತೊಂದು ವರದಿ ಹೀಗಿದೆ ನೀವು ಅಖಬದ ದಿವಸ ರಾತ್ರಿ ಹೊತ್ತು ಪ್ರವಾದಿ(ಸ) ಅವರೊಂದಿಗೆ ಮಾಡಿದ ಪ್ರತಿಜ್ಞೆ ಅದನ್ನು ನೆನಪಿನಲ್ಲಿಟ್ಟುಕೊಳ್ಳಿ. ಅಲ್ಲಾಹನ ಆಣೆ! ಅಲ್ಲಾಹನ ಬಳಿ ನಿಮ್ಮಲ್ಲಿ ಯಾವ ನೆಪವೂ ಇರುವುದಿಲ್ಲ ಒಂದು ವೇಳೆ ಕುಫ್ಫಾರರು ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಬಳಿ ತಲುಪಿದಾಗ ನಿಮ್ಮಲ್ಲಿ ಒಬ್ಬರ ಕಣ್ಣು ಸಹ ಜೀವಂತವಾಗಿದ್ದರೆ ಅಂದರೆ ಯಾವ ವ್ಯಕ್ತಿಯು ಜೀವಂತವಾಗಿರಬಾರದು ಜೀವಂತವಿದ್ದರೆ ಅಲ್ಲಾಹನ ಬಳಿ ಯಾವ ನೆಪವೂ ಇರುವುದಿಲ್ಲ. ಹಝ್ರತ್ ಉಬೈ ಬಿನ್ ಕಅಬ್(ರ) ವರದಿ ಮಾಡುತ್ತಾರೆ ನಾನು ಇನ್ನೂ ಅಲ್ಲಿಯೇ ಇದ್ದೆ ಅಂದರೆ ಹಝ್ರತ್ ಸಅದ್(ರ)ರವರ ಬಳಿ ಇದ್ದೆ ಆಗ ಹಝ್ರತ್ ಸಅದ್ ಬಿನ್ ರಬೀಅ್(ರ) ನಿಧನ ಹೊಂದಿದರು. ಆ ಸಂದರ್ಭದಲ್ಲಿ ಅವರು ಗಾಯಗೊಂಡಿದ್ದರು. ನಾನು ಪ್ರವಾದಿ ಸಲ್ಲಲ್ಲಹು ಅಲೈಹಿವಸಲ್ಲಮರ ಬಳಿ ಬಂದು ಎಲ್ಲಾ ಮಾತುಕತೆ ತಿಳಿಸಿದೆನು. ಇದು ಅವರ ಪರಿಸ್ಥಿತಿ ಆಗಿತ್ತು ಅವರು ಹೀಗೆ ಶಹೀದ್ ಆದರು. ಇದಕ್ಕೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು ಅಲ್ಲಾಹನು ಅವರಿಗೆ ಕರುಣಿಸಲಿ. ಆತನ ಜೀವಿತ ಕಾಲದಲ್ಲಿಯು ಮತ್ತು ಮರಣದಲ್ಲಿಯು ಅಲ್ಲಾಹ್ ಹಾಗೂ ಅಲ್ಲಾಹನ ಸಂದೇಶವಾಹಕನ ಒಳಿತು ಬಯಸುವವನಾಗಿದ್ದನು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಸಂಪುಟ–3, ಪುಟ–396, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017), ಅಲ್‌ಇಸ್ತಿಯಾಬ್ ಸಂಪುಟ–2, ಪುಟ–157, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2010, ಉಸದುಲ್ ಗಾಬ ಸಂಪುಟ–2, ಪುಟ–432–433, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2016)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಹಝ್ರತ್ ಸಅದ್(ರ) ರವರ ಶಹಾದತ್‌ನ ಘಟನೆ ವಿವರಿಸುತ್ತಾ ಹೀಗೆ ಹೇಳುತ್ತಾರೆ: ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ಸಹ ರಣಾಂಗಣದಲ್ಲಿ ಇಳಿದಿದ್ದರು ಮತ್ತು ಶಹೀದ್ ಆದವರನ್ನು ನೋಡುತ್ತಿದ್ದರು. ಆ ದೃಶ್ಯವೂ ಮಸ್ಲಿಮರಿಗೆ ರಕ್ತದ ಕಂಬನಿ ಸುರಿಸುವಂತಾಗಿತ್ತು. ಪ್ರವಾದಿ(ಸ) ಗಾಯಗೊಂಡಿದ್ದರು ಆದರೂ ಅವರು ರಣಾಂಗಣಕ್ಕೆ ಬಂದಿದ್ದರು. ಶಹೀದ್ ಆದವರನ್ನು ಹೇಗೆ ದಫನ್ ಮಾಡಬೇಕು ಎಂದು ಚಿಂತಿಸಲಾಗುತ್ತಿತ್ತು. ಆಗಿನ ಪರಿಸ್ಥಿತಿಯು ಮುಸ್ಲಿಮರಿಗೆ ರಕ್ತದ ಕಂಬನಿ ಸುರಿಯುವಂತೆ ಮಾಡುತ್ತಿತ್ತು. ಎಪ್ಪತ್ತು ಮುಸ್ಲಿಮರು ರಕ್ತಸಿಕ್ತವಾಗಿ ಮಣ್ಣಿನಲ್ಲಿ ಬಿದ್ದಿದ್ದರು. ಅರಬರ ಮೃಗ ಪರಂಪರೆ ಆಗಿದ್ದ ಮುಸ್ಲ ಎಂಬಂತೆ ಕಾಣುತ್ತಿತ್ತು. ಅಂದರೆ ಅವರಿಗೆ ಶಹೀದ್ ಮಾಡಿದ್ದಲ್ಲದೆ ಅವರನ್ನು ಮುಸ್ಲ ಸಹ ಮಾಡಿದ್ದರು. ಅವರ ಅಂಗಗಳನ್ನು ಕತ್ತರಿಸಿದ್ದರು. ಅವರ ಮುಖ ಚಹರೆಗಳನ್ನು ಬಿಗಡಾಯಿಸಿದ್ದರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಮುಂದೆ ಬರೆಯುತ್ತಾರೆ ಆ ಮೃತರಾದವರಲ್ಲಿ ಕೇವಲ ಆರು ಮುಹಾಜಿರ್‌ಗಳಿದ್ದರು ಮತ್ತು ಉಳಿದವರೆಲ್ಲರು ಅನ್ಸಾರ್‌ಗಳಾಗಿದ್ದರು. ಖುರೈಶರಲ್ಲಿ ಮೃತ ಹೊಂದಿದವರ ಸಂಖ್ಯೆ ಇಪ್ಪತ್ತ ಮೂರು ಆಗಿತ್ತು. ಪ್ರವಾದಿ ಮುಹಮ್ಮದ್(ಸ) ತಮ್ಮ ಚಿಕ್ಕಪ್ಪ ಹಾಗೂ ತಮ್ಮ ಸಹೋದರ ಹಮ್‌ಝ ಬಿನ್ ಅಬ್ದುಲಕ್ ಮುತಲ್ಲಿಬ್(ರ) ಅವರ ಮೃತದೇಹದ ಬಳಿ ಹೋದಾಗ ನಿರಾಶರಾದರು ಏಕೆಂದರೆ ಹಿಂದ ಅಬೂಸುಫಿಯಾನ್‌ನ ಪತ್ನಿ ಅವರ ಮೃತದೇಹವನ್ನು ಬಹಳ ಬಿಗಡಾಯಿಸಿಟ್ಟಿದ್ದಳು. ಸ್ವಲ್ಪ ಹೊತ್ತು ಅವರು ನಿಶಬ್ಧರಾಗಿದ್ದರು ಮತ್ತು ಅವರ ಚಹರೆಯ ಮೇಲೆ ದುಃಖದ ಹಾಗೂ ಕೋಪದ ಭಾವಗಳು ವ್ಯಕ್ತವಾಗುತ್ತಿತ್ತು. ಒಮ್ಮೆ ಪ್ರವಾದಿ(ಸ) ಅವರ ಯೋಚನೆಯು ಮಕ್ಕದ ಆ ಮೃಗ ಸ್ವಭಾವದವರೊಂದಿಗೆ ಇದೇ ರೀತಿ ವರ್ತಿಸುವ ತನಕ ಅವರು ಚೇತರಿಸಿ ಬರುವುದಿಲ್ಲವೋ ಎಂದು ಭಾಸವಾಯಿತು. ಆದರೆ ಹುಝೂರ್(ಸ) ಈ ಯೋಚನೆಯಿಂದ ತಮ್ಮನ್ನು ತಡೆದರು. ಮತ್ತು ತಾಳ್ಮೆ ವಹಿಸಿದರು ಬದಲಿಗೆ ಅವರು ಮುಸ್ಲ ಅಂಗಗಳನ್ನು ಕತ್ತರಿಸುವುದು, ಚಹರೆಗಳನ್ನು ಬಿಗಡಯಿಸುವ ಪದ್ಧತಿಯನ್ನು ಇಸ್ಲಾಮಿನಲ್ಲಿ ನಿಷೇಧಿಸಿ ಹೇಳಿದರು. ವೈರಿಗಳು ಹೇಗಾದರೂ ವರ್ತಿಸಲಿ ಇಂತಹ ಮೃಗಗಳ ಮಾರ್ಗವನ್ನು ನಾವು ಅನುಸರಿಸುವುದಿಲ್ಲ ನಾವು ಒಳಿತು ಉಪಕಾರದ ವರ್ತನೆಯನ್ನು ಅನುಸರಿಸುವೆವು. ಹುಝುರ್(ಸ) ರವರ ತಂದೆಯ ಸಹೋದರಿಯಾದ ಸುಫಿಯಾ ಬಿನ್ತ್ ಅಬ್ದುಲ್ ಮುತಲ್ಲಿಬ್ ತನ್ನ ಸಹೋದರ ಹಮ್‌ಝ(ರ) ಅವರನ್ನು ಬಹಳ ಪ್ರೀತಿಸುತ್ತಿದ್ದರು. ಅವರು ಸಹ ಮುಸ್ಲಿಮರ ಕಷ್ಟದ ಬಗ್ಗೆ ತಿಳಿದ ನಂತರ ಮದೀನದಿಂದ ಹೋರ ಬಂದರು. ಪ್ರವದಿ(ಸ) ಸುಫೀಯಾನ್‌ರವರ ಪುತ್ರ ಝುಬೈರ್ ಬಿನ್ ಉಮೂಮ್(ರ) ಅವರಿಗೆ ಹೇಳಿದರು: ತಮ್ಮ ತಾಯಿಗೆ ಸಹೋದರನ ಮೃತದೇಹವನ್ನು ನೋಡಬೇಡಿ ಎಂದು ಹೇಳಿರಿ. ಆದರೆ ಸಹೋದರಿಯ ಪ್ರೀತಿ ಇತ್ತು. ಪುತ್ರ ಹೇಳಿದನು ಹಝ್ರತ್ ಹಮ್‌ಝ(ರ) ರವರ ಮೃತದೇಹವನ್ನು ನೋಡಬೇಡಿರಿ ಏಕೆಂದರೆ ಮುಸ್ಲ ಮಾಡಿದ್ದಾರೆ ಎಂದು. ಆದರೆ ಅದಕ್ಕೆ ಅವರು ಒಪ್ಪಲಿಲ್ಲ. ನೋಡಲು ಒತ್ತಾಯಿಸಿದರು ಅದರೊಂದಿಗೆ ಅವರು ಹೇಳಿದರು ನಾನು ತಾಳ್ಮೆ ವಹಿಸುವೆನು ಎಂದು ವಾಗ್ದಾನ ಮಾಡುತ್ತೇನೆ. ಹೀಗೆ ಅವರು ಹೋಗಿ ತಮ್ಮ ಸಹೋದರನ

ಮೃತದೇಹವನ್ನು ಕಂಡು **ಇನ್ನಾಲಿಲ್ಲಾಹಿ ವಿನ್ನಾ ಇಲೈಹಿ ರಾಜಿಊನ್** ಎಂದು ಹೇಳಿ ಸುಮ್ಮನಾದರು.

ಅನಂತರ ಮತ್ತೆ ಬರೆಯುತ್ತಾರೆ ಖುರೈಶರು ಅನ್ಯ ಸಹಾಬರವರ ಮೃತದೇಹದೊಂದಿಗೆ ಹೀಗೆಯೇ ಮಾಡಿದ್ದರು. ಹೀಗಾಗಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಅಬ್ದುಲ್ಲಾಹ್ ಬಿನ್ ಹಜಶ್(ರ) ರವರ ಮೃತದೇಹವನ್ನು ಸಹ ಬಹಳ ಕೆಟ್ಟದಾಗಿ ಬಿಗಡಾಯಿಸಿದ್ದರು. ರಸೂಲುಲ್ಲಾಹ್(ಸ) ಒಂದು ಮೃತದೇಹದಿಂದ ಇನ್ನೊಂದು ಮೃತದೇಹವನ್ನು ನೋಡುತ್ತಿದ್ದಾಗ ರಸೂಲುಲ್ಲಾಹ್(ಸ) ಅವರ ಮುಖ ಚಹರೆಯ ಮೇಲೆ ದುಃಖದ ಭಾವನೆಗಳು ವ್ಯಕ್ತವಾಗುತ್ತಿತ್ತು. ಈ ಸಂದರ್ಭದಲ್ಲಿಯೇ ರಸೂಲುಲ್ಲಾಹ್(ಸ) ಅವರು ಸಅದ್ ಬಿನ್ ರಬೀಅ್(ರ) ರವರ ಮೃತದೇಹವನ್ನು ಕಾಣಲು ಆದೇಶಿಸಿರಬಹುದು. ಅವರು ಜೀವಂತವಾಗಿದ್ದಾರೆಯೆ ಅಥವಾ ಅವರು ಮೃತರಾಗಿದ್ದಾರೆಯೇ? ಎಂದು ಏಕೆಂದರೆ ನಾನು ಅವರನ್ನು ಯುದ್ಧದಲ್ಲಿ ವೈರಿಗಳ ಬರ್ಛಿಗಳ ಮಧ್ಯೆ ಸಿಲುಕಿದ್ದನ್ನು ಕಂಡಿದ್ದೇನೆ. ರಸೂಲುಲ್ಲಾಹ್(ಸ) ಅವರ ಈ ಆದೇಶದ ಮೇರೆಗೆ ಒರ್ವ ಸಹಾಬಿ ಉಬೈ ಬಿನ್ ಕಅಬ್(ರ) ಹೋದರು. ರಣಾಂಗಣದಲ್ಲಿ ಸುತ್ತಾಡಿದರು ಎಲ್ಲಾ ಕಡೆ ಕೂಗಾಡಿದರು ಸಅದ್‌ರವರ ಹೆಸರನ್ನು ಕೂಗಿದರು ಆದರೂ ಯಾವ ಸುಳಿವು ಸಿಗಲಿಲ್ಲ. ಕೊನೆಗೆ ನಿರಾಶರಾಗಿ ಮರಳುತ್ತಿರುವಾಗ ಯೋಚಿಸಿದರು ಕೊನೆಗೊಮ್ಮೆ ಪ್ರವಾದಿ(ಸ) ಹೆಸರು ಕೂಗುವೆನು ಹೀಗಾದರು ಅವರ ಬಗ್ಗೆ ಯಾವುದಾದರು ಸುಳಿವು ಸಿಗಬಹುದು ಎಂದು ಕೂಗಿದರು. ಪ್ರವಾದಿ(ಸ) ಅವರು ನಿಮ್ಮನ್ನು ಹುಡುಕಾಡಲು ನನ್ನನ್ನು ಕಳುಹಿಸಿದ್ದಾರೆ ಎಂದರು. ಈ ಶಬ್ಧವನ್ನು ಆಲಿಸಿದ ನಂತರ ಮೃತ ದೇಹಗಳಿಂದ ಗಂಭೀರವಾಗಿ ಗಾಯಗೊಂಡಿರುವವರಿಂದ ಯಾರು ಎಂದು ಶಬ್ಧ ಕೇಳಿಸಿತು. ನಾನು ಇಲ್ಲಿದ್ದೇನೆ ಎಂದರು. ಉಬೈ ಬಿನ್ ಕಅಬ್(ರ) ಗಮನವಿಟ್ಟು ಆಲಿಸದಾಗ ಅವರಿಗೆ ಮೃತದೇಹಗಳಲ್ಲಿ ಸಅದ್‌ರನ್ನು ಪಡೆದರು. ಅವರು ಮರಣಾಸನ್ನಾ ಸ್ಥಿತಿಯಲ್ಲಿದ್ದರು. ಅವರೊಂದಿಗೆ ಹಝ್ರತ್ ಅಬೀ ಬಿನ್ ಕಅಬ್ ಹೇಳಿದರು: ನನ್ನನ್ನು ಪ್ರವಾದಿ(ಸ) ನಿಮ್ಮ ಬಗ್ಗೆ ವಿಚಾರಿಸುವುದಕ್ಕೆ ಕಳುಹಿಸಿದ್ದಾರೆ. ಅದಕ್ಕೆ ಸಅದ್ ಹೇಳಿದರು ರಸುಲುಲ್ಲಾಹ್(ಸ) ಅವರಿಗೆ ನನ್ನ ಸಲಾಮ್ ತಿಳಿಸಿರಿ ಮತ್ತು ಹೇಳಿರಿ ಅಲ್ಲಾಹನ ಸಂದೇಶವಾಹಕರ ಹಾಗೂ ಅವರ ಅನುಯಾಯಿಗಳ ಬಲಿದಾನ ಹಾಗೂ ನಿಷ್ಠೆಯ ಕಾರಣದಿಂದ ಸಿಗುವಂತಹ ಆ ಸವಾಬ್ ಬೇರೆ ಸಂದೇಶವಾಹಕರಿಂದ ಹೆಚ್ಚಾಗಿ ನೀಡಲಿ ಮತ್ತು ನಿಮ್ಮ ಕಣ್ಣುಗಳನ್ನು ತಣ್ಣಗಾಗಿರಿಸಲಿ ಮತ್ತು ನನ್ನ ಸಹೋದರ ಮುಸ್ಲಿಮರಿಗೆ ಸಹ ನನ್ನ ಸಲಾಮ್ ತಿಳಿಸಿರಿ ಮತ್ತು ನನ್ನ ಖೌಮಿನವರಿಗೆ ತಿಳಿಸಿರಿ ಒಂದು ವೇಳೆ ನಿಮ್ಮ ಜೀವವಿದ್ದು ಪ್ರವಾದಿ(ಸ) ಅವರಿಗೆ ಹಾನಿವುಂಟಾದರೆ ಅಲ್ಲಾಹನ ಮುಂದೆ ನಿಮಲ್ಲಿ ಯಾವ ನೆಪವು ಇರುವುದಿಲ್ಲ. ಇದನ್ನು ಹೇಳಿ ಸಅದ್ ಜೀವ ನೀಡಿದರು. (ಸೀರತ್ ಖಾತಮನ್ನಬೀಯೀನ್, ಪುಟ–500–501)

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಈ ಸಂದರ್ಭವನ್ನು ವಿವರಿಸಿ ಹೇಳುತ್ತಾರೆ: "ಉಹುದ್ ಯುದ್ಧದ ಸಂದರ್ಭದ ಘಟನೆಯಾಗಿದೆ ಇದು. ಯುದ್ಧದ ನಂತರ ರಸೂಲುಲ್ಲಾಹ್(ಸ) ಹಝ್ರತ್ ಉಬೈ ಬಿನ್ ಕಅಬ್(ರ) ಅವರಿಗೆ ಹೇಳಿದರು: ಹೋಗಿ ಗಾಯಾಳುಗಳನ್ನು ವಿಚಾರಿಸಿರಿ. ಅವರು ವಿಚಾರಿಸುತ್ತಾ ಹಝ್ರತ್ ಸಅದ್ ಬಿನ್ ರಬೀಅ್(ರ) ರವರ ಬಳಿ ತಲುಪುತ್ತಾರೆ. ಅವರು ಗಂಭೀರವಾಗಿ ಗಾಯಗೊಂಡಿರುತ್ತಾರೆ. ಅವರಿಗೆ ಹೇಳುತ್ತಾರೆ ನಮ್ಮ ಸಂದೇಶವಿದ್ದರೆ ಹೇಳಿರಿ ಎಂದು. ಹಝ್ರತ್ ಸಅದ್ ಬಿನ್ ರಬೀಅ್(ರ) ಮುಗುಳುನಗೆ ನಗುತ್ತಾ ಹೇಳುತ್ತರೆ ನಾನು ಯಾವುದಾದರು ಮುಸ್ಲಿಮರು ಇಲ್ಲಿಗೆ ಬರಲಿ ನಾನು ಸಂದೇಶ ನೀಡುವೆನು ಎಂದು ಯೋಚಿಸುತ್ತ ಇದ್ದೆ. ನೀವು ನನ್ನ ಕೈಯಲ್ಲಿ ಕೈ ಇಟ್ಟು ವಾಗ್ದಾನ ಮಾಡಿರಿ ನನ್ನ ಸಂದೇಶವನ್ನು ಅವರ ಬಳಿ ತಲುಪಿಸುವಿರಿ ಎಂದು. ಅನಂತರ ಅವರು ನೀಡಿದ ಸಂದೇಶವೂ ಹೀಗಿತ್ತು: ನನ್ನ ಸಹೋದರ ಮುಸ್ಲಿಮರಿಗೆಲ್ಲಾ ನನ್ನ ಸಲಾಮ್ ತಿಳಿಸಿರಿ ಮತ್ತು ನನ್ನ ಖೌಮಿನವರಿಗೆ ಮತ್ತು ನನ್ನ ಕುಟುಂಬದವರಿಗೆ ಹೇಳಿರಿ ನಿಮ್ಮ ಬಳಿ ಪ್ರವಾದಿ ಮುಹಮ್ಮದ್ ಸಲ್ಲಲ್ಲಹು ಅಲೈಹಿವಸಲ್ಲಮರು ಅಲ್ಲಾಹನ ಒಂದು ಉತ್ತಮವಾದ ಅಮಾನತ್ ಆಗಿದ್ದಾರೆ. ನಾವು ಈ ಅಮಾನತ್ತನ್ನ ನಮ್ಮ ಜೀವಕ್ಕಿಂತ ಮಿಗಿಲಾಗಿ ಕಾಪಾಡಿಕೊಂಡಿದ್ದೇವೆ. ಈಗ ನಾವು ಹೋಗುತ್ತಿದ್ದೇವೆ ಈ ಅಮನತ್ತನ್ನು ಸಂರಕ್ಷಿಸುವುದು ನಿಮ್ಮ ಕರ್ತವ್ಯವಾಗಿದೆ. ನೀವು ಎಂದಿಗೂ ಇದನ್ನು ಸಂರಕ್ಷಿಸುವಲ್ಲಿ ದೌಬಲ್ಯ ತೋರದಿರಿ. ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಸಂದರ್ಭವನ್ನು ವಿವರಿಸುತ್ತಾ ಹೇಳುತ್ತಾರೆ: ಇಂತಹ ಸಂದರ್ಭದಲ್ಲಿ ಮನುಷ್ಯನು ಯೋಚಿಸುತ್ತಾನೆ. ನಾನು ಸಾಯುತ್ತಿದ್ದೇನೆ. ನನ್ನ ಪತ್ನಿಯ ಸ್ಥಿತಿ ಏನಾಗುವುದು. ನನ್ನ ಮಕ್ಕಳನ್ನು ಯಾರು ನೋಡಿಕೊಳ್ಳುವರು ಎಂದೆಲ್ಲಾ. ಆದರೆ ಆ ಗಾಯಗೊಂಡು ಮರಣಾಸನ್ನನಾದ ಸಹಾಬಿ ಯಾವ ಸಂದೇಶವನ್ನೂ ನೀಡಲಿಲ್ಲ. ಅವರು ಇಷ್ಟು ಮಾತ್ರ ಹೇಳಿದರು: ನಾವು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸಂರಕ್ಷಿಸುತ್ತಾ ಇಹಲೋಕದಿಂದ ಅಗಲಿ ಹೋಗುತ್ತಿದ್ದೇವೆ. ನೀವು ಸಹ ಇದೇ ಮಾರ್ಗವನ್ನು ಅವಲಂಬಿಸಿ ಅನಂತರ ನಮ್ಮನ್ನು ಹಿಂಬಾಲಿಸಿರಿ. ಎಲ್ಲದಕ್ಕಿಂತಲೂ ಮುಖ್ಯವಾದ ಕೆಲಸ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸಂರಕ್ಷಿಸುವುದಾಗಿದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಬರೆಯುತ್ತಾರೆ: ಆ ಜನರ ಹೃದಯದಲ್ಲಿದ್ದ ಈಮಾನಿನ ಶಕ್ತಿ ಆ ರೀತಿ ಇತ್ತು. ಅದರ ಮೂಲಕ ಅವರು ಲೋಕವನ್ನು ಬುಡಮೇಲು ಮಾಡಿದರು. ಅವರು ಖೈಸರ್ ಮತ್ತು ಕಿಸ್ರರ ಸಾಮ್ರಾಜ್ಯಗಳನ್ನು ಗೆದ್ದರು. ಖೈಸರೆ ರೂಮ್ ಆಶ್ಚರ್ಯ ಚಕಿತನಾದನು ಈ ಜನರು ಯಾರು ಎಂದು. ಕಿಸ್ರನು ತನ್ನ ಸೇನಾಧಿಪತಿಗೆ ಬರೆದನು ನೀವು ಈ ಅರಬರನ್ನು ಸೋಲಿಸಲು ಸಾಧ್ಯವಿಲ್ಲವಾದರೆ ಹಿಂದಿರುಗಿ ಬಂದು ಮನೆಯಲ್ಲಿ ಬಳೆಯನ್ನು ಧರಿಸಿಕೊಳ್ಳಿರಿ. ಅದಕ್ಕೆ ಆತನು ಉತ್ತರಿಸಿದನು ಇವರೆಲ್ಲರು ಮನುಷ್ಯರು ಎಂದು ತಿಳಿದು ಬರುತ್ತಿಲ್ಲ. ಇವರೆಲ್ಲರು ಖಡ್ಗಗಳು ಹಾಗೂ ಬರ್ಛಿಗಳ ಮೇಲಿನಿಂದ ಹಾರಿ ಬರುತ್ತಾರೆ." (ತಫ್ಸೀರೆ ಕಬೀರ್ ಸಂಪುಟ–7, ಪುಟ–338) ಅವರಲ್ಲಿ ಎಂತಹ ಭಾವನೆಗಳಿದ್ದವು ಎಂದರೆ ಅವರನ್ನು ಸೋಲಿಸುವುದಕ್ಕೆ ನಮಗೆ ಸಾಧ್ಯವಿಲ್ಲ.

ಒಮ್ಮೆ ಹಝ್ರತ್ ಸಅದ್ ಬಿನ್ ರಬೀಅ್(ರ) ರವರ ಪುತ್ರಿ ಉಮ್ಮೆ ಸಅದ್ ಹಝ್ರತ್ ಅಬೂಬಕ್ಕರ್(ರ) ರವರ ಬಳಿ ಬಂದಾಗ ಹಝ್ರತ್ ಅಬೂಬಕ್ಕರ್(ರ) ರವರು ಅವರಿಗಾಗಿ ಬಟ್ಟೆಯನ್ನು ಹಾಸಿದರು. ಹಝ್ರತ್ ಉಮರ್(ರ) ಬಂದು ವಿಚಾರಿಸಿದರು ಇವರು ಯಾರು? ಎಂದು. ಹಝ್ರತ್ ಅಬೂಬಕ್ಕರ್(ರ) ಹೇಳಿದರು ಇವರು ನನಗಿಂತ ಮತ್ತು ನಿಮಗಿಂತ ಹೆಚ್ಚು ಶ್ರೇಷ್ಠ ವ್ಯಕ್ತಿಯ ಪುತ್ರ ಆಗಿದ್ದಾರೆ. ಹಝ್ರತ್ ಉಮರ್ ಮತ್ತೆ ಕೇಳಿದರು ಪ್ರವಾದಿ(ಸ) ರವರ ಖಲೀಫರೆ ಇವರು ಯಾರು? ಅದಕ್ಕೆ ಹಝ್ರತ್ ಅಬೂಬಕ್ಕರ್(ರ) ಹೇಳಿದರು ಪ್ರವಾದಿ(ಸ) ರವರ ಜೀವಿತ ಕಾಲದಲ್ಲಿಯೆ ಸ್ವರ್ಗ ಪ್ರಾಪ್ತಿಯ ಬರವಸೆ ಹೊಂದಿದ್ದರು ಮತ್ತು ಅವರು ತಮ್ಮ ನಿವಾಸವನ್ನು ಸ್ವರ್ಗದಲ್ಲಿ ನಿರ್ಮಿಸಿಕೊಂಡರು. ಆಗ ನಾನು ಮತ್ತು ನೀವು ಉಳಿದಿದ್ದೆವು. (ಅಲ್‌ಅಸಾಬ ಸಂಪುಟ–2, ಪುಟ–315, ದಾರುಲ್‌ಫಿಕರ್ ಬೈರೂತ್ 2001)

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ ಹೇಳುತ್ತಾರೆ: ಹಝ್ರತ್ ಸಅದ್ ಬಿನ್ ರಬೀಅ್ ಶಹೀದರಾದ ನಂತರ ಅವರ ಪತ್ನಿ ತನ್ನ ಇಬ್ಬರು ಪುತ್ರಿಯರೊಂದಿಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದು ಹೇಳಿದರು: ಇವರ ಚಿಕ್ಕಪ್ಪ ಈ ಹೆಣ್ಣು ಮಕ್ಕಳ ಸಂಪತ್ತನ್ನು ವಶಪಡಿಸಿಕೊಂಡರು ಮತ್ತು ಅವರಿಗೆ ಏನೂ ದೊರೆಯಲಿಲ್ಲ ಎಂದು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅಲ್ಲಾಹನು ಇದರ ಬಗ್ಗೆ ತೀರ್ಪು ನೀಡುವನು ಎಂದು. ಅನಂತರ ವಾರೀಸು ಹಕ್ಕುಗಳಿಗೆ ಸಂಬಂಧಿಸಿದ ಪವಿತ್ರ ಖುರ್‌ಆನ್ ವಚನಗಳು ಅವತೀರ್ಣವಾದುವು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಹೆಣ್ಣು ಮಕ್ಕಳ ಚಿಕ್ಕಪ್ಪನನ್ನು ಕರೆಯಿಸಿ ಹೇಳಿದರು: ಸಅದ್‌ರ ಇಬ್ಬರು ಹೆಣ್ಣು ಮಕ್ಕಳಿಗೆ ಸಅದ್‌ರ ಸಂಪತ್ತಿನ ಮೂರನೆಯ ಒಂದು ಭಾಗ ಕೊಡಿರಿ. ಹೆಣ್ಣು ಮಕ್ಕಳ ತಾಯಿಗೆ ಎಂಟನೆಯ ಒಂದು ಭಾಗ ಕೊಡಿರಿ. ಸಂಪತ್ತಿನ ಉಳಿದ ಭಾಗ ನಿಮಗೆ ಸಿಗುವುದು. (ಸನನ್ ತಿರ್‌ಮಿಝಿ, ಕಿತಾಬುಲ್ ಫರಾಎಜ್, ಹದೀಸ್–2092)

ಈ ಘಟನೆಯನ್ನು ಪ್ರಸ್ತಾಪಿಸುತ್ತ ಇದರ ಬಗ್ಗೆ ಇನ್ನಷ್ಟು ವಿವರಾತ್ಮಕವಾಗಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್(ರ) ಸೀರತ್ ಖಾತಮನ್ನಬೀಯೀನ್ ಗ್ರಂಥದಲ್ಲಿ ಹೀಗೆ ಬರೆದಿದ್ದಾರೆ: ಹಝ್ರತ್ ಸಅದ್ ಬಿನ್ ರಬೀಅ್(ರ) ಒಬ್ಬ ಶ್ರೇಷ್ಠ, ಶ್ರೀಮಂತ ವ್ಯಕ್ತಿ ಆಗಿದ್ದರು. ತಮ್ಮ ಗೋತ್ರದಲ್ಲಿ ಗಣ್ಯ ವ್ಯಕ್ತಿಯಾಗಿದ್ದರು. ಅವರಿಗೆ ಯಾವ ಗಂಡು ಮಕ್ಕಳು ಇರಲಿಲ್ಲ. ಕೇವಲ ಎರಡು ಹೆಣ್ಣು ಮಕ್ಕಳು ಮತ್ತು ಪತ್ನಿ ಇದ್ದರು. ಅಂದಿನ ವರೆಗೂ ಇನ್ನು ವಾರಿಸುದಾರರ ಹಕ್ಕುಗಳ ಬಗ್ಗೆ ಯಾವ ಆಜ್ಞೆಗಳು ಅವತರಿಸಿರಲಿಲ್ಲ ಮತ್ತು ಸಹಾಬರಲ್ಲಿ ಪ್ರಾಚೀನ ಅರಬ್ ಪರಂಪರೆಯ ಪ್ರಕಾರ ಅವರಲ್ಲಿ ಪಿತ್ರಾರ್ಜಿತವನ್ನು ಹಂಚಲಾಗುತ್ತಿತ್ತು. ಮೃತ ಹೊಂದುವವನಿಗೆ ಗಂಡು ಮಕ್ಕಳು ಇಲ್ಲದಿದ್ದರೆ ಅವರ ತಂದೆಯ ಸಂಬಂಧಿಕರು ಸಂಪತ್ತನ್ನು ತಮ್ಮ ವಶಕ್ಕೆ ಪಡೆಯುತ್ತಿದ್ದರು. ವಿಧವೆ ಹಾಗೂ ಅವಳ ಹೆಣ್ಣ ಮಕ್ಕಳಿಗೆ ಏನೂ ಸಿಗುತ್ತಿರಲಿಲ್ಲ. ಹೀಗೆ ಹಝ್ರತ್ ಸಅದ್ ಬಿನ್ ರಬೀಅ್ ರವರು ಮೃತರಾದಾಗ ಅವರ ಸಹೋದರರು ಅವರ ಇಡೀ ಸಂಪತ್ತನ್ನು ತಮ್ಮ ವಶದಲ್ಲಿ ಪಡೆದುಕೊಂಡರು ಅವರ ವಿಧವೆ ಹಾಗೂ ಹೆಣ್ಣು ಮಕ್ಕಳಿಗೆ ಏನು ನೀಡಲಿಲ್ಲ. ಈ ತೊಂದರೆಯನ್ನು ಅನುಭವಿಸಲಾರದೆ ಹಝ್ರತ್ ಸಅದ್ ಬಿನ್ ರಬೀಅ್‌ರವರ ಪತ್ನಿ ತನ್ನ ಇಬ್ಬರು ಹೆಣ್ಣು ಮಕ್ಕಳನ್ನು ಕರೆದುಕೊಂದು ಪ್ರವಾದಿ ಮುಹಮ್ಮದ್(ಸ) ರವರ ಬಳಿ ಬಂದು ತಮ್ಮ ತೊಂದರೆಯನ್ನು ಪ್ರಸ್ತಾಪಿಸಿದರು. ಇವರ ಈ ತೊಂದರೆಯನ್ನು ಆಲಿಸಿದ ನಂತರ ಹುಝೂರ್(ಸ) ಅವರಿಗೂ ದುಃಖವಾಯಿತು ಆದರೆ ಇದರ ಬಗ್ಗೆ ಯಾವ ಆದೇಶವನ್ನು ಅಲ್ಲಾಹನಿಂದ ಅವತರಿಸದಿದ್ದ ಕಾರಣ ರಸೂಲುಲ್ಲಾಹ್(ಸ) ಹೇಳಿದರು ತಾಳ್ಮೆ ವಹಿಸಿರಿ ಅಲ್ಲಾಹನಿಂದ ಯಾವ ಆಜ್ಞೆ ಅವತರಿಸುತ್ತದೆಯೋ ಅದರ ಪ್ರಕಾರ ಅನುಸರಿಸಲಾಗುವುದು ಎಂದರು. ಹೀಗೆ ಸ್ವಲ್ಪ ಸಮಯದ

ನಂತರ ರಸೂಲುಲ್ಲಾಹ್(ಸ) ರವರ ಮೇಲೆ ಪವಿತ್ರ ವಚನಗಳು ಅವತರಿಸಿತು ಅದು ಪವಿತ್ರ ಖುರ್‌ಆನಿನ ಸೂರ ನಿಸಾದಲ್ಲಿ ಪ್ರಸ್ತಾಪಿಸಲಾಗಿದೆ. ತದನಂತರ ಹುಝೂರ್(ಸ) ರವರು ಹಝ್ರತ್ ಸಅದ್ ಬಿನ್ ರಬೀಅ್(ರ) ರವರ ಸಹೋದರರನ್ನು ಕರೆಸಿ ಹೇಳಿದರು: ಸಅದ್‌ನ ಆಸ್ತಿಯಿಂದ ಮೂರನೇಯ ಒಂದು ಭಾಗ ಅವರ ಪುತ್ರಿಯರಿಗೆ ನೀಡಿರಿ ಮತ್ತು ಎಂಟನೇಯ ಒಂದು ಭಾಗ ಅವರ ಪತ್ನಿಗೆ ನೀಡಿರಿ ಮತ್ತುಳಿದ ಭಾಗ ನೀವು ತೆಗೆದುಕೊಳ್ಳ ಬಹುದು ಎಂದು ಹೇಳಿದರು. ಅಂದಿನಿಂದ ವಾರಿಸುದಾರರ ಹಕ್ಕುಗಳು ಪ್ರಾರಂಭವಾಯಿತು. ಅದರಲ್ಲಿ ಪತ್ನಿ ತನ್ನ ಮಕ್ಕಳುಳ್ಳ ಪತಿಯ ಆಸ್ತಿಯಲ್ಲಿ ಎಂಟನೇಯ ಭಾಗ ಹಾಗೂ ಮಕ್ಕಳಿಲ್ಲದಿದ್ದರೆ ನಾಲ್ಕನೇ ಭಾಗ ಪಡೆದಳು ಮತ್ತು ಪುತ್ರಿಯರು ತಮ್ಮ ತಂದೆಯ ಆಸ್ತಿಯಲ್ಲಿ ತನ್ನ ಸಹೋದರನ ಭಾಗದ ಅರ್ಧ ಭಾಗ ಪಡೆದಳು ಮತ್ತು ಸಹೋದರ ಇಲ್ಲದಿದ್ದರೆ ಎಲ್ಲಾ ಆಸ್ತಿಯ ಪರಿಸ್ಥಿಯ ಪ್ರಕಾರ ಎರಡು ಮೂರನೇಯ ಒಂದು ಭಾಗ ಅಥವಾ ಅರ್ಧ ಭಾಗ ಪಡೆದಳು ಮತ್ತು ತಾಯಿ ತನ್ನ ಮಕ್ಕಳುಳ್ಳ ಪುತ್ರನ ಆಸ್ತಿಯಲ್ಲಿ ಆರನೇಯ ಬಾಗ ಮತ್ತು ಮಕ್ಕಳಿಲ್ಲದ ಪುತ್ರನ ಆಸ್ತಿಯಲ್ಲಿ ಮೂರನೇಯ ಭಾಗಕ್ಕೆ ಹಕ್ಕನ್ನು ಪಡೆದರು. ಅದೇ ರೀತಿ ಬೇರೆ ವಾರಿಸುದಾರರ ಭಾಗಗಳನ್ನು ವಿಭಜಿಸಲಾಯಿತು. ಮತ್ತು ಮಹಿಳೆಯಿಂದ ಕಸಿಯಲ್ಪಟ್ಟ ಹಕ್ಕನ್ನು ಹಿಂದಿರುಗಿಸಲಾಯಿತು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಮುಂದೆ ಒಂದು ಟಿಪ್ಪಣಿ ಮಡಿದ್ದಾರೆ ಅವರು ಹೀಗೆ ಬರೆಯುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಮೊದಲು ಮತ್ತು ಅವರ ಅನಂತರ ಲೋಕದ ಚರಿತ್ರೆಯಲ್ಲಿ ಅವರ ಹಾಗೆ ಮಹಿಳೆಯರ ಹಕ್ಕುಗಳನ್ನು ಸಂರಕ್ಷಿಸಿದವರು ಬೇರೆ ಯಾರೂ ಇಲ್ಲ. ವಾರೀಸು ಹಕ್ಕುಗಳು, ವಿವಾಹ, ಪತಿಯೊಂದಿಗೆ ಪತ್ನಿಯ ಸಂಬಂಧ, ತಲಾಖ್, ಖುಲಅ್, ಮಹಿಳೆ ಸ್ವಂತ ಸ್ವತ್ತು ಸಂಪಾದಿಸುವ ಅಧಿಕಾರ, ತನ್ನ ಸ್ವಂತ ಸಂಪತ್ತನ್ನು ತನ್ನ ಇಷ್ಟ ಪ್ರಕಾರ ಉಪಯೋಗಿಸುವ ಹಕ್ಕು, ವಿದ್ಯಾಭ್ಯಾಸ ಗಳಿಸುವ ಹಕ್ಕು, ಮಕ್ಕಳ ಸಂರಕ್ಷಣೆ ಮತ್ತು ತರಬೇತಿಗೆ ಸಂಬಂಧಿಸಿದ ಹಕ್ಕುಗಳು, ಸಾಮಾಜಿಕ ಮತ್ತು ರಾಷ್ಟ್ರೀಯ ವಿಷಯಗಳಲ್ಲಿ ಭಾಗವಹಿಸುವ ಹಕ್ಕು, ವೈಯಕ್ತಿಕ ಸ್ವಾತಂತ್ರ್ಯ, ಧಾರ್ಮಿಕ ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಮಹಿಳೆಯರಿಗೆ ನೀಡಲ್ಪಟ್ಟಿವೆ. ಒಟ್ಟಾರೆ ಹೇಳುವುದಾದರೆ, ಧರ್ಮಕ್ಕೆ ಸಂಬಂಧಿಸಿ ಮತ್ತು ಲೌಕಿಕ ವ್ಯವಹಾರಗಳಿಗೆ ಸಂಬಂಧಿಸಿ ಮಹಿಳೆ ಹೆಜ್ಜೆ ಇರಿಸಬಹುದಾದ ಪ್ರತಿಯೊಂದು ಕ್ಷೇತ್ರದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಹಿಳೆಯರ ಎಲ್ಲಾ ಅವಶ್ಯಕ ಹಕ್ಕುಗಳನ್ನು ಅಂಗೀಕರಿಸಿ ಕೊಟ್ಟಿದ್ದಾರೆ. ಅರಬ್ ದೇಶದ ಮಹಿಳೆಯರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಯೋಜಿಸಲ್ಪಟ್ಟದ್ದನ್ನು ತಮ್ಮ ವಿಮೋಚನೆಯ ಸಂದೇಶವಾಗಿ ಗಣಿಸುತ್ತಿದ್ದರು.

ಮತ್ತೆ ಅವರು ಬರೆಯುತ್ತಾರೆ ನನಗೆ ನನ್ನ ಮಾರ್ಗವನ್ನು ಸರಿದು ಬರೆಯಬೇಕಾಗುತ್ತದೆ ಅಂದರೆ ಪ್ರಸ್ತಾಪಿಸುತ್ತಿರುವ ವಿಷಯದಿಂದ ಸರಿಯುತ್ತಿದ್ದೇನೆ. ಒಂದು ವೇಳೆ ಇದರ ಬಗ್ಗೆ ಇನ್ನಷ್ಟು ವಿವರಾತ್ಮಕವಾಗಿ ಬರೆಯುತ್ತಿದ್ದರೆ ಸರಿಯ ಬೇಕಾಗುತ್ತಿತ್ತು ಇಲ್ಲದಿದ್ದರೆ ನಾನು ವಿವರಿಸುತ್ತಿದ್ದೆ ಮಹಿಳೆಯ ಬಗ್ಗೆ ರಸೂಲುಲ್ಲಾಹ್(ಸ) ರವರ ಬೋಧನೆಗಳು ಎಂತಹ ಉತ್ತುಂಗ ಸ್ಥಾನದಲ್ಲಿದೆ ಅದರ ಬಗ್ಗೆ ಯಾವ ಧರ್ಮವೂ ಯಾವ ಸಂಗ ಸಂಸ್ಥೆಗಳು ತಲುಪಲಿಲ್ಲ ನಿಸ್ಸಂದೇಹವಾಗಿಯು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ಪ್ರಿಯ ನುಡಿಗಳಲ್ಲಿ ಒಂದು ಗಾಢವಾದ ಸತ್ಯ ಅಡಕವಾಗಿದೆ. ಅವರು ಹೇಳಿದರು: **ಹುಬ್ಬಿಬ ಇಲೈಯ್ಯ ಮಿನ್ ದುನಿಯಾಕುಮುನ್ನಿಸಾಉ ವತ್ತೀಬು ವ ಜುಇಲತ್ ಖುರ್ರತು ಐನಿ ಫಿಸ್ಸಲಾತಿ**

ಅಂದರೆ ನನ್ನ ಪ್ರಕೃತಿಗೆ ಯಾವ ವಸ್ತುಗಳನ್ನು ಪ್ರೀತಿಸುವ ಅನುಭೂತಿ ನೀಡಲಾಗಿದೆಯೋ ಅವು ಮಹಿಳೆ ಮತ್ತು ಸುಗಂಧ ದ್ರವ್ಯಗಳಾಗಿವೆ. ಆದರೆ ನನ್ನ ಕಣ್ಣುಗಳ ತಂಪು ನಮಾಝ್‌ನಲ್ಲಿ. ಎಂದರೆ ಆರಾಧನೆಯಲ್ಲಿ ಇರಿಸಲ್ಪಟ್ಟಿದೆ. (ಸೀರತ್ ಖಾತಮನ್ನಬಿಯೀನ್ ಪುಟ-507-509)

ಲೋಕ ಈ ವಾಸ್ತವಿಕತೆಯನ್ನು ಅರಿತುಕೊಂಡು ಮಾಲಿನ್ಯಗಳಿಂದ ಮತ್ತು ಪ್ರಕ್ಷುಬ್ಧತೆಗಳಿಂದ ಸುರಕ್ಷಿತವಾಗಲಿ. ನಮ್ಮ ಮಹಿಳೆಯರು ಸಹ ಈ ವಾಸ್ತವಿಕತೆಯನ್ನು ಅರಿತುಕೊಳ್ಳಬೇಕು. ಇಸ್ಲಾಮ್ ಮಹಿಳೆಯರಿಗೆ ನೀಡಿದ ಸ್ಥಾನವನ್ನು ಯಾವುದೇ ಧರ್ಮ ಅವರಿಗೆ ನೀಡಿಲ್ಲ. ತಥಾಕಥಿತ ಮಹಿಳೆಯರ ಹಕ್ಕುಗಳ ಪ್ರತಿಪಾದಕರಾದ ಧೀಮಂತರ ಸಂಘಟನೆಯಾಗಲಿ ಚಳುವಳಿಗಳಾಗಲಿ ನೀಡಿಲ್ಲ. ಮಹಿಳೆಯರಿಗೆ ಹಕ್ಕುಗಳನ್ನು ನೀಡುವ ಇಸ್ಲಾಮ್ ಧರ್ಮದ ಆಜ್ಞೆಗಳನ್ನು ಈಡೇರಿಸುವ ಭಾಗ್ಯವನ್ನು ಅಲ್ಲಾಹನು ಪುರುಷರಿಗೆ ನೀಡಲಿ. ಆ ಮೂಲಕ ಈ ಸಮಾಜ ಶಾಂತಿಭರಿತ ಸಮಾಜವಾಗಲಿ.

ಈಗ ನಾನು ಇಂದಿನ ಪರಿಸ್ಥಿತಿಯಲ್ಲಿ ಪ್ರಾರ್ಥಿಸುತ್ತಾ ಇರುವ ಬಗ್ಗೆ ಸಂಕ್ಷಿಪ್ತವಾಗಿ ಹೇಳಲು ಬಯಸುತ್ತೇನೆ. ನೀವು ಪ್ರಾರ್ಥಿಸಿರಿ. ಕೊರೋನಾದ ಸಾಂಕ್ರಾಮಿಕ ವಿಪತ್ತಿನಿಂದ ಅಲ್ಲಾಹನು ಲೋಕವನ್ನು ರಕ್ಷಿಸುವವನಾಗಲಿ. ಅದರೊಂದಿಗೆ ಮಾನವರು ಬದುಕಿ ಬಾಳುವುದು ಏಕದೇವನ ಕಡೆಗೆ ಬಾಗುವುದರಲ್ಲಿ ಮತ್ತು ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸಿ ಕೊಡುವುದರಲ್ಲಿದೆ ಎಂದು ಮನುಷ್ಯರು ತಿಳಿಯುವಂತಾಗಲಿ. ಸರಕಾರಗಳಿಗೆ ಅಲ್ಲಾಹನು ವಿವೇಕ ನೀಡಲಿ. ಅವರು ನ್ಯಾಯನಿಷ್ಠವಾದ ಆಡಳಿತ ನಡೆಸುವವರಾಗಲಿ. ಅಮೇರಿಕದಲ್ಲಿ ಈಗ ವ್ಯಾಪಕವಾಗಿರುವ ಅಶಾಂತಿ ಗಲಬೆ ಗೊಂದಲಗಳಿಂದ ಪ್ರತಿಯೊಬ್ಬ ಅಹ್ಮದಿಯನ್ನು ಅವುಗಳ ಕೆಟ್ಟ ಪರಿಣಾಮಗಳಿಂದ ರಕ್ಷಿಸಲಿ. ಸರಕಾರದ ಆಡಳಿತ ವ್ಯವಸ್ಥೆ ಅರಿತುಕೊಳ್ಳಬೇಕು ಎಲ್ಲಾ ನಾಗರಿಕರ ಹಕ್ಕುಗಳನ್ನು ಈಡೇರಿಸುತ್ತಾ ಸರಕಾರವನ್ನು ಚಲಾಯಿಸಬೇಕಾಗಿದೆ ಎಂದು. ಸರಕಾರ ಎಷ್ಟು ಶಕ್ತಿಶಾಲಿಯಾಗಿದ್ದರೂ ದೇಶದ ಜನರಲ್ಲಿ ಆತಂಕಭರಿತ ಸ್ಥಿತಿಯಿದ್ದರೆ ಅದರೆದುರಿಗೆ ಯಾವುದೇ ಸರಕಾರ ನೆಲೆ ನಿಲ್ಲಲಾರದು. ಲೋಕದಲ್ಲಿ ಎಲ್ಲಿಯೆಲ್ಲಾ ಗಲಬೆ ಗೊಂದಲಗಳಿವೆಯೋ ಅಲ್ಲಿ ಗಲಭೆ ಗೊಂದಲಗಳು ದೂರ ಸರಿಯುವಂತಾಗಲಿ. ಸರಕಾರಗಳು ಜನರ ಹಕ್ಕುಗಳನ್ನು ಈಡೇರಿಸುವವರಾಗಲಿ. ಜನರು ಸಹ ತಮ್ಮ ನ್ಯಾಯಬದ್ಧ ಹಕ್ಕುಗಳಿಗೋಸ್ಕರ ಸರಕಾರಗಳ ಮೇಲೆ ಕಾನೂನು ಚೌಕಟ್ಟಿನ ಒಳಗಿದ್ದುಕೊಂಡು ಒತ್ತಡ ಹೇರುವವರಾಗಲಿ.

ಇದೇ ರೀತಿ ಪಾಕಿಸ್ತಾನದ ಸರಕಾರ ಸಹ ಯೋಚಿಸಬೇಕು. ಮುಲ್ಲಾಗಳಿಗೆ ಭಯಪಟ್ಟುಕೊಂಡು ಅಹ್ಮದಿಯರ ವಿರುದ್ಧ ನಡೆಸಲಾಗುವ ದೌರ್ಜನ್ಯಗಳು ವರ್ಧಿಸುತ್ತಿವೆ. ಸರಕಾರ ಅದಕ್ಕೆ ಬೆಂಬಲ ನೀಡಬಾರದು. ಅಲ್ಲಿನ ಸರಕಾರ ನ್ಯಾಯನಿಷ್ಠವಾಗಿ ಸರಕಾರವನ್ನು ಚಲಾಯಿಸಬೇಕು. ಅವರು ತಮ್ಮ ದೇಶದ ಚರಿತ್ರೆಯಿಂದ ಪಾಠ ಕಲಿಯಬೇಕು. ಇಂದಿನ ಸ್ಥಿತಿಯನ್ನು ಮುಂದುವರಿಸಿ ನಿಮ್ಮ ಸರಕಾರ ದೀರ್ಘಕಾಲ ನಡೆಸಬಹುದೆಂದು ಯೋಚಿಸ ಬೇಡಿರಿ. ದೌರ್ಜನ್ಯಗಳ ಪರಿಣಾಮವಾಗಿ ಲೋಕದಲ್ಲಿ ಅಹ್ಮದಿಯ್ಯತ್ ಮೊದಲಿಗಿಂತ ಹೆಚ್ಚು ಅಭಿವೃದ್ಧಿ ಗಳಿಸಿದೆ. ಇನ್ನು ಮುಂದೆ ಸಹ ಇನ್‌ಶಾಅಲ್ಲಾಹ್ ಅದು ಅಭಿವೃದ್ಧಿ ಗಳಿಸುವುದು. ಇದು ಅಲ್ಲಾಹನ ಕೆಲಸವಾಗಿದೆ. ಅದನ್ನು ತಡೆಗಟ್ಟ ಬಲ್ಲವನು ಯಾರೂ ಇಲ್ಲ. ಅದಾಗ್ಯೂ ನಾವು ಪ್ರಾರ್ಥಿಸುತ್ತೇವೆ ಎಲ್ಲಾ ಸ್ಥಳಗಳಿಂದ ಅಶಾಂತಿಯನ್ನೂ ಗಲಬೆ ಗೊಂದಲಗಳನ್ನೂ ಅಲ್ಲಾಹನು ದೂರ ಸರಿಸಲಿ.

ಇಂದಿನ ಕಾಲದಲ್ಲಿ ವ್ಯಾಪಿಸಿರುವ ಸಾಂಕ್ರಾಮಿಕ ರೋಗದಿಂದ ಮನುಷ್ಯನು ಪಾಠ ಕಲಿಯಬೇಕು ಮತ್ತು ತನ್ನ ಸ್ಥಿತಿಯನ್ನು ಬದಲಾವಣೆ ಮಾಡಬೇಕು. ಅಹ್ಮದಿಯರಾದ ನಾವು ಮೊದಲಿಗಿಂತ ಹೆಚ್ಚಾಗಿ ಅಲ್ಲಾಹನ ಹಕ್ಕುಗಳನ್ನು ಮತ್ತು ಅವನ ದಾಸರ ಹಕ್ಕುಗಳನ್ನು ಈಡೇರಿಸಿ ಕೊಡುವ ಭಾಗ್ಯಗಳಿಸುವವರಾಗಲಿ. ನಾವು ಹೆಚ್ಚು ಹೆಚ್ಚಾಗಿ ಅಲ್ಲಾಹನ ಪ್ರೀತಿ ಗಳಿಸುವವರಾಗೋಣ. ಜಮಾಅತಿನ ಅಭಿವೃದ್ಧಿಯನ್ನು ಬೇಗನೆ ನಮ್ಮ ಮುಂದೆ ನಾವು ಕಾಣುವವರಾಗೋಣ – ಆಮೀನ್.

*********************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಅಂದರೆ ರಸೂಲುಲ್ಲಾಹ್(ಸ) ರವರ ಕಾರ್ಯಗಳನ್ನು ನಾಶಪಡಿಸಲು ಪ್ರಯತ್ನಿಸುವವರಿಗೆ, ಕುತಂತ್ರಗಳನ್ನು ಅನುಸರಿಸುವವರಿಗೆ ಅಲ್ಲಾಹನು ತಿರುಗುಬಾಣವಾಗುವಂತಹ ಸನ್ನಿವೇಶ ಉಂಟು ಮಾಡುವನು. ಅಲ್ಲಾಹನಿಗೆ ಯಾವುದೇ ದೊಡ್ಡದಾದ ಸಾಮಗ್ರಿಗಳ ಆವಶ್ಯಕತೆಯಿರುವುದಿಲ್ಲ. ಉದಾಹರಣೆಗೆ ಆನೆಯ ಜನರನ್ನು ಅವನು ಸಣ್ಣ ಪಕ್ಷಿಗಳಿಂದಲೇ ವಿನಾಶಕ್ಕೆ ತಳ್ಳಿದನು. ಅದರಂತೆಯೇ ಅಂತಿಮ ದಿನದವರೆಗೆ ಈ ಭವಿಷ್ಯವಾಣಿ ಅನ್ವಯಾಗುವುದು. ಯಾವಾಗಲೆಲ್ಲಾ ಅಸ್‌ಹಾಬುಲ್ ಫೀಲ್ (ಆನೆಯ ಜನರು) ರೀತಿಯ ಸ್ಥಿತಿ ಉಂಟಾಗುವುದೇ ಆಗಾಗ ಅಲ್ಲಾಹನು ಅವರ ವಿನಾಶಕ್ಕಾಗಿ ಬೇಕಾಗುವ ಸಾಧನಗಳನ್ನು ಒದಗಿಸುವನು.

ಪಾದರಿಯವರದ್ದು ಇದೇ ತತ್ವವಾಗಿದೆ. ಅವರ ಎದೆಯ ಮೇಲೆ ಇಸ್ಲಾಮ್ ಧರ್ಮವೇ ಒಂದು ಬಂಡೆಯಂತಿದೆ. ಹೊರತು ಉಳಿದ ಎಲ್ಲ ಧರ್ಮಗಳು ಅವರಿಗೆ ಅತಿ ಕ್ಷುಲ್ಲಕವಾಗಿದೆ. ಹಿಂದುಗಳು ಸಹ ಕ್ರೈಸ್ತರ ಪರವಾಗಿ ಮತ್ತು ಇಸ್ಲಾಮಿನ ವಿರುದ್ಧವಾಗಿ ಗ್ರಂಥಗಳನ್ನು ಬರೆದಿದ್ದಾರೆ. ರಾಮಚಂದ್ರ ಮತ್ತು ಠಾಕೂರದಾಸರು ಇಸ್ಲಾಮಿನ ವಿರುದ್ಧ ಶತಪ್ರಯತ್ನಪಟ್ಟು ಗ್ರಂಥಗಳನ್ನು ಬರೆದಿದ್ದಾರೆ. ಅವರ ವಿನಾಶಕ್ಕೆ ಇಸ್ಲಾಮ್ ಧರ್ಮವೇ ಕಾರಣವಾಗಿದೆ ಎಂದು ಅವರ ಆತ್ಮಸಾಕ್ಷಿಯೇ ಒಪ್ಪುತ್ತದೆ. ಸಹಜವಾಗಿ ಯಾರಿಂದ ನಮಗೆ ಅಪಾಯವಿರುತ್ತದೆಯೋ ಅದರ ಭಯವೇ ನಮ್ಮ ಮೇಲೆ ಆವರಿಸಿರುತ್ತದೆ. ಒಂದು ಕೋಳಿಮರಿಯು ಬೆಕ್ಕನ್ನು ನೋಡಿದ ಕೂಡಲೆ ಚೀಕಲು ಪ್ರಾರಂಭಿಸುತ್ತದೆ. ಅದೇ ರೀತಿ ವಿವಿಧ ಧರ್ಮಗಳ ಅನುಯಾಯಿಗಳು ಸಾಮಾನ್ಯವಾಗಿ ಮತ್ತು ಪಾದರಿಗಳು ವಿಶೇಷವಾಗಿ ಇಸ್ಲಾಮಿನ ವಿರುದ್ಧ ಶಕ್ತಿ ಪ್ರಯೋಗ ಮಾಡಲು ಕಾರಣವೇನೆಂದರೆ ಅವರಿಗೆ ನಿಶ್ಚಿತವಾದಂತಿದೆ. ಒಳಗಿಂದೊಳಗೆ ಅವರ ಮನಸ್ಸು ಹೇಳುತ್ತದೆ – ಎಲ್ಲ ಮಿಥ್ಯ ಮೂಲಗಳನ್ನು ಅಳಿಸಿ ಹಾಕುವ ಶಕ್ತಿ ಇಸ್ಲಾಮ್ ಧರ್ಮಕ್ಕೆ ಮಾತ್ರವಿದೆ ಎಂದು. **(ಮಲ್‌ಫೂಝಾತ್ ಸಂಪುಟ-1, ಪುಟ-158 ರಿಂದ 160 ಮುದ್ರಣ 2008 ಖಾದಿಯಾನ್)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಜಾಗೃತಗೊಳಿಸುವಂತಹದ್ದಾಗಿತ್ತು. ಅವರು ಇತರ, ಭಾಷಣಗಾರರ ಮಾತುಗಳನ್ನು ಪ್ರಸ್ತಾಪಿಸಿದ್ದು ಪ್ರಶಂಸನೀಯವಾಗಿದೆ. ಅದರಿಂದ ತಿಳಿದು ಬರುವುದೇನೆಂದರೆ ಅವರು ಎರಡೂ ಮಾಧ್ಯಮದವರನ್ನು ಕೇಳುವವರಾಗಿದ್ದಾರೆ. ಜನರು ಅವರ ಮಾತುಗಳನ್ನು ಕೇಳಲು ಬಂದರೆ ಖಲೀಫರು ಸಹ ಅಷ್ಟೇ ಮಹತ್ವ ಅತಿಥಿಗಳೀಗೆ ನೀಡುವವರಾಗಿದ್ದಾರೆ ಎಂದು ತಿಳಿದುಬರುತ್ತದೆ. ಇದು ಸಾಮಾಜಿಕ ಒಗ್ಗಟ್ಟಿಗೋಸ್ಕರ ಬಹುಮುಖ್ಯವಾಗಿದೆ. ಅದರ ಬಗ್ಗೆ ಇಮಾಮ್ ಜಮಾಅತ್ ಅಹ್ಮದಿಯಾ ವಿಶೇಷ ರೀತಿಯಲ್ಲಿ ಗಮನಸೆಳೆದಿದ್ದಾರೆ.

ಮೇಲಾನಿ ಲಾಡೋರ್ ಸಾಹಿಬ್ ಹೇಳಿದರು. ನಾನು ಆಧ್ಯಾತ್ಮಿಕ ಪಂಥಗಳ ಬಗ್ಗೆ ಸಂಶೋಧನೆ ನಡೆಸುತ್ತಿದ್ದೇನೆ ಮತ್ತು ಆಧ್ಯಾತ್ಮಿಕ ವಿಷಯದಲ್ಲಿ ಶಿಕ್ಷಣವು ಪಡೆದಿರುತ್ತೇನೆ. ಈಗ ನಾನು ಒಂದು ಶಾಲೆಯಲ್ಲಿ ವಿದ್ಯಾರ್ಥಿಗಳೀಗೆ ಆಧ್ಯಾತ್ಮಿಕ ತರಬೇತಿ ನೀಡುತ್ತಿದ್ದೇನೆ. ಇಮಾಮ್ ಜಮಾಅತ್ ಅಹ್ಮದಿಯಾ ನನ್ನ ಮುಂದಿನಿಂದ ಹೊಗುತ್ತಿರುವಾಗ ನಾನು ಒಂದು ವಿಡಿಯೋ ಮಾಡಿದ್ದೆ. ಆದರೆ ಅವರ ದೃಷ್ಟಿ ನನ್ನ ಮೇಲೆ ಬಿದ್ದಾಗ ನನ್ನ ಶರೀರದಿಂದ ಎಲ್ಲ ಶಕ್ತಿ ಹರಣವಾದಂತಾಯಿತು. ಮತ್ತು ನಾನು ಮೂಕವಿಸ್ಮಿತನಾದೆ. ಖಲೀಫರು ದುಆ ಮಾಡಿಸಿದಾಗ ನನ್ನ ಕಣ್ಣಿನಲ್ಲಿ ದೃಶ್ಯಗಳು ತುಂಬಿ ಬಂದವು.

ಆದರೆ ನಾನು ತುಂಬ ಪ್ರಯತ್ನಪಟ್ಟು ತನ್ನನ್ನು ತಾನು ಸುಧಾರಿಸಿಕೊಂಡೆನು. ಖಲೀಫರ ಉಪಸ್ಥಿತಿಯಿಂದ ವಾತಾವರಣವನ್ನೆಲ್ಲ ಒಂದು ವಿಶೇಷ ರೀತಿಯ ಆಧ್ಯಾತ್ಮಿಕ ಪ್ರಭಾವದಿಂದ ತುಂಬಿ ತುಳುಕುತ್ತಿತ್ತು. ಅದು ಐಹಿಕ ಹಾಗೂ ಭೌತಿಕವಲ್ಲದೆ ಆಧ್ಯಾತ್ಮಿಕ ಶಕ್ತಿ ಹೊಂದಿತ್ತು.

ಜೋಬಿಮ್ ಟಾಗಟ್ ಮಾಯರ್ ಸಾಹಿಬ್ ಹೇಳುತ್ತಾರೆ. ನಿಮ್ಮ ಖಲೀಫರ ಉನ್ನತ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಮಾತನಾಡಿದ್ದಾರೆ. ಅವರ ಮಾತಿನ ಧಾಟಿಯು ಆತ್ಮೀಯವಾಗಿ, ಪ್ರೀತಿಯಿಂದ ತುಂಬಿದ್ದಾಗಿತ್ತು. ನನಗೆ ಅವರ ಮಾತುಗಳನ್ನು ಕೇಳುತ್ತಲೇ ನಾನು ಯಾರು, ಯಾವ ಧರ್ಮಕ್ಕೆ ಸಂಬಂಧಿಸಿದವರು ಅಂದುಕೊಳ್ಳದೇ ನೈತಿಕ ಹಾಗೂ ಮಾನವೀಯ ಮೌಲ್ಯಗಳ ನೆಲೆಯಲ್ಲಿ ಒಂದೇ ಆಗಿರುತ್ತವೆ ಎಂಬ ಭಾವ ಮೂಡಿತು. ಇಮಾಮ್ ಜಮಾಅತ್ ಅಹ್ಮದಿಯಾ ಅವರು ಒಳ್ಳೆಯದು ಯಾವುದು ಮತ್ತು ಕೆಟ್ಟದು ಯಾವುದು ಕೂಲಂಕುಷವಾಗಿ ವಿವರಿಸಿದ್ದಾರೆ. ಅವರು ನಮಗೆ ತನ್ನ ನೆರೆಹೊರೆಯವರ ಹಕ್ಕುಗಳ ಬಗ್ಗೆ ಗಹನಹರಿಸಲು ತಿಳಿಸಿರುತ್ತಾರೆ ಮತ್ತು ಒಂದೇ ಕುಟುಂಬಗಳ ಹಾಗೆ ಜಿವಿಸಲು ಉಪದೇಶಿಸಿರುತ್ತಾರೆ. ಖಲೀಫರ ವ್ಯಕ್ತಿತ್ವದಿಂದ ಹೀಗೆ ಪ್ರತೀತವಾಗಿತ್ತು. ಅವರಲ್ಲಿ ಕಿಂಚಿತ್ತೂ ಬಲಾತ್ಕಾರದ ಲವಲೇಶವು ಇರಲಿಲ್ಲ ಹೊರತು ಪ್ರೀತಿ ಸ್ನೇಹದ ಮೂರ್ತರೂಪವಾಗಿದ್ದರು. ನಿಮ್ಮ ಜಮಾಅತ್ತಿನ ತರಬೇತಿಗೊಂಡ ಜನರು ನಿಮ್ಮ ಸತ್ಯತೆಯ ಪ್ರತೀಕವಾಗಿದೆ. ದಿನನಿತ್ಯ ನಮಗೆ ಅವರೊಡನೆ ವ್ಯವಹಾರದ ಅನುಭವವಿದೆ.

ಮೇಯರ್ Jan lise ಸಾಹಿಬ್ ಹೇಳಿದರು. ನಿಮ್ಮ ಖಲೀಫರು ಹೇಳಿದಂತಹ ಮಾತುಗಳು ನಮ್ಮ ಪರಿಸರದಲ್ಲಿ, ಸಮಾಜದಲ್ಲಿ ಜನಜನಿತವಾಗಬೇಕಾಗಿದೆ.

ಶಾಂತಿಯು ಎಲ್ಲ ಧರ್ಮಗಳ ಬುನಾದಿಯಾಗಿದೆ. ನಿಮ್ಮ ಖಲೀಫರು ತನ್ನ ವ್ಯಕ್ತಿತ್ವದಿಂದಲೂ ಶಾಂತಿದೂರಾಗಿದ್ದಾರೆ. ಅವರ ನಯ ವಿನಯ ಮಾನವೀಯವಾಗಿದೆ. ಖಲೀಫರು ಓರ್ವ ಸತ್ಯಸಂಧ ಮಾನವರಾಗಿದ್ದಾರೆ. ಅವರು ನನ್ನ ಮೇಲೆ ತನ್ನ ಸತ್ಯದ ಆಳವಾದ ಪ್ರಭಾವ ಬೀರಿದ್ದಾರೆ.

Friedrich Gunther ಸಾಹಿಬ್ ಹೇಳುತ್ತಾರೆ. ಖಲಿಫರು ಓರ್ವ ಹೃದಯ ವೈಶಾಲ್ಯಯುಳ್ಳ ಅತ್ಯುತ್ತಮ ಗುಣಗಳುಳ್ಳ ವ್ಯಕ್ತಿಯಾಗಿದ್ದಾರೆ. ಅವರ ವ್ಯಕ್ತಿತ್ವದಲ್ಲಿ ಒಂದು ಆಧ್ಯಾತ್ಮಿಕ ಶಕ್ತಿ ಮತ್ತು ಸೆಳೆತವಿದೆ. ಅವರ ಮಾತುಗಳಿಗೆ ಅವರ ಪಾವನವಾದ ವ್ಯಕ್ತಿತ್ವ ಶಕ್ತಿ ನೀಡುತ್ತಿದೆ. ನಾನು ನನ್ನ ಮೇಲೆ ಅವರ ಭಾಷಣ ಹಾಗೂ ವ್ಯಕ್ತಿತ್ವದ ಪ್ರಭಾವಗಳ ಪರಿಣಾಮ ಕಾಣುತ್ತಿದ್ದೇವೆ.

Elke Schrieber ಸಾಹಿಬಾ ಹೇಳುತ್ತಾರೆ. ನಾನು ಖಲೀಫರ ಉಪಸ್ಥಿತಿಯಿಂದ ಎಷ್ಟೊಂದು ಪ್ರಭಾವಿತನಾದೆ ಅಂದರೆ ಸಹಜವಾಗಿ ತನ್ನ ಮನಸ್ಸು ಅವರೊಡನೆ ಭೇಟಿ ಮಾತನಾಡಲು ಇಚ್ಛಿಸಿದ್ದೆ. ಆದರೆ ನನ್ನಲ್ಲಿ ಧೈರ್ಯವಿರಲಿಲ್ಲ. ನನ್ನ ಮೇಜಿನ ಪಕ್ಕ ಕುಳಿತ ಆತಿಥ್ಯರು ನನಗೆ ನೆರವಾದರು ಮತ್ತು ವೇದಿಕೆಗೆ ಕರೆದುಕೊಂಡು ಹೋದರು. ನಾನು ಖಲೀಫರ ಬಳಿ ತಲುಪಿದಾಗ ತನ್ನ ಕಾಲುಗಳು ಕಂಪಿಸತೊಡಗಿತು. ಆದರೆ ಅವರು ನನಗೆ ಧೈರ್ಯ ನೀಡಿದರು ಮತ್ತು ನನ್ನ ಮಾತುಗಳನ್ನು ತುಂಬ ಗಮನವಹಿಸಿ ಕೇಳಿದರು. ನಾನು ಹೇಳಿದೆ. ನಾನು ವೃದ್ಧೆ, ತನ್ನ ಜೀವನದಲ್ಲಿ ಮತ್ತೊಮ್ಮೆ ಭೇಟಿಯಾಗುವ ಸಂದರ್ಭ ದೊರಕಬಹುದೋ ಇಲ್ಲವೋ ಯಾರಿಗೆ ಗೊತ್ತು. ಅದನ್ನು ಯೋಚಿಸಿ ನಾನು ಈ ವೇದಿಕೆಗೆ ತಮ್ಮನ್ನು ಭೇಟಿಯಾಗಲು ಬಂದಿರುತ್ತೇವೆ. ಅವರು ನೀಡಿದ ಪ್ರೋತ್ಸಾಹ ನಾನು ಎಂದೂ ಮರೆಯಲು ಸಾಧ್ಯವಿಲ್ಲ.

ಮ್ಯುಗನ್ ಬರ್ಗ್ ಸಾಹಿಬಾ ಹೇಳುತ್ತಾರೆ. ಖಲೀಫರು ಓರ್ವ ಅತ್ಯಂತ ಆಕರ್ಷಣೀಯ ವ್ಯಕ್ತಿಗಳಾಗಿದ್ದಾರೆ. ಅವರೊಡನಿರುವ ಜನರ ಪ್ರೀತಿಯಿಂದ ಅದು ಸ್ಪಷ್ಟವಿದೆ. ಅವರು ಇತರರ ಭಾಷಣಗಳನ್ನು ಗಮನವಹಿಸಿ ಕೇಳಿದ್ದು ನನಗೆ ತುಂಬ ಮೆಚ್ಚುಗೆಯಾಯಿತು. ಇಂದಿನ ಕಾಲದಲ್ಲಿ ಪ್ರತಿಯೊಬ್ಬರು ಕೇವಲ ತನ್ನ ಮಾತುಗಳನ್ನು ಹೇಳುತ್ತಾರೆ ಮತ್ತು ಇತರರ ಮಾತುಗಳನ್ನು ಗಮನಿಸುವ ಪ್ರವೃತ್ತಿ ಇಲ್ಲ. ಎಷ್ಟೊಂದು ಸ್ವಾರ್ಥಿಗಳಾಗಿದ್ದಾರೆಂದರೆ ಇನ್ನೊಬ್ಬರ ಮಾತು ಕೇಳಲು ಸಹ ಇಷ್ಟಪಡುವುದಿಲ್ಲ. ಆದರೆ ಖಲಿಫರು ಎರಡು ಕಡೆಯವರ ಗೌರವ ಕಾಪಾಡಿದ್ದಾರೆ. ಆದುದರಿಂದ ಅವರ ಈ ನಡವಳಿಕೆ ನಮಗೆ ಮಾದರಿಯಾಗಬೇಕಾಗಿದೆ.

Oliver ಸಾಹಿಬ್ ಕೇಳಿದರು. ಹುಝೂರ್(ಅಬಿಅ) ಕೇವಲ ಈ ಮಸೀದಿಯ ಉದ್ಘಾಟನೆಗೋಸ್ಕರ ಬಂದಿರುವರೇ? ಅವರಿಗೆ ತಿಳಿಸಲಾಯಿತು. ಇತರ ಮಸೀದಿಗಳ ಉದ್ಘಾಟನೆ ಸಂದರ್ಭದಲ್ಲೂ ಬಂದಿರುತ್ತಾರೆ. ಹುಝೂರ್(ಅಬಿಅ) ಪ್ರತಿಯೊಬ್ಬ ಅಹ್ಮದಿಯೊಂದಿಗೆ ವೈಯಕ್ತಿಕ ಸಂಬಂಧವಿರಲು ಪ್ರಯತ್ನಿಸುತ್ತಾರೆ. ಪತ್ರ ವ್ಯವಹಾರವು ಮಾಡುತ್ತಾರೆ ಎಂದು ತಿಳಿಸಿದಾಗ ಅವರು ಅಚ್ಚರಿಗೊಂಡು ಕೇಳುತ್ತಾರೆ. "ಹುಝೂರ್(ಅಬಿಅ) ಅಷ್ಟೆಲ್ಲ ಕೆಲಸಗಳು ಹೇಗೆ ಮಾಡುತ್ತಾರೆ? ಅವರು Fulda ದಲ್ಲಿ ಹುಝೂರರು ವಿವರಿಸಿದ ಹದೀಸ್ "ಹಝ್ರತ್ ರಸೂಲುಲ್ಲಾಹ್(ಸ) ಕ್ರೈಸ್ತರ ಒಂದು ತಂಡಕ್ಕೆ ಮಸೀದಿಯಲ್ಲಿ ಆರಾಧನೆ ಮಾಡಲು ಅನುಮತಿ ನೀಡಿದ್ದರು ಎಂದು ಕೇಳಿ ನಾನು ನಿಮ್ಮ ಮಸೀದಿಯಲ್ಲಿ ಆರಾಧನೆ ಮಾಡಬಯಸುತ್ತೇನೆ ಎಂಬ ಬಯಕೆ ವ್ಯಕ್ತಪಡಿಸಿದರು.

ಸ್ಥಳೀಯ ನಾಗರಿಕರು Ulrich Lenz ಹೇಳಿದರು. ನಾನು 30 ವರ್ಷಗಳಿಂದ ಜಮಾಅತನ್ನು ಅರಿತಿದ್ದೇನೆ. ಇಲ್ಲಿಯವರೆಗೆ ಜಮಾಅತಿನ ಬಗ್ಗೆ ಒಳ್ಳೆಯ ಅಭಿಪ್ರಾಯ ಹೊಂದಿರುತ್ತೇನೆ. ಇಮಾಮ್ ಜಮಾಅತರ ವ್ಯಕ್ತಿತ್ವ ತುಂಬ ಭವ್ಯ ಹಾಗೂ ಪ್ರಭಾವಪೂರ್ಣವಾಗಿದೆ. ಆದರೆ ಅವರ ಪ್ರತಾಪ ಮತ್ತು ಘನತೆ ಒಂದು ನೆಮ್ಮದಿ ಹಾಗೂ ಪ್ರೀತಿಯನ್ನು ಹೊಂದಿರುತ್ತದೆ. ಅವರ ಉಪಸ್ಥಿತಿ ಸಹ ಶಾಂತಿ ಮತ್ತು ಪ್ರೀತಿಗಳ ಪ್ರಭಾವ ಬೀರುತ್ತದೆ. ಎಲ್ಲ ಧರ್ಮಗಳ ಉದ್ದೇಶವು ಎಲ್ಲರಿಗಾಗಿ ಶಾಂತಿ ಎಂಬುದೇ ಇರುತ್ತದೆ.

*ಸಾಹಿಬಾ ಮಾಜಿ ಸಂಸತ್ ಸದಸ್ಯರು ಹೇಳುತ್ತಾರೆ. ಇಮಾಮ್ ಜಮಾಅತ್ ಅಹ್ಮದಿಯರ ಸಂಬೋಧನೆಯು ತೃಪ್ತಿಕರವಾಗಿತ್ತು. ಸಾಮಾಜಿಕ ವ್ಯವಸ್ಥೆ ಕುರಿತು ಹೇಳಿದ ಮಾತುಗಳು ಪರಿಪೂರ್ಣ, ಸತ್ಯಾಧಾರಿತ ಮತ್ತು ಸರಿಯಾಗಿದ್ದವು.

Canel ಹೇಳಿದರು. ಇಮಾಮ್ ಜಮಾಅತ್ ಅಹ್ಮದಿಯಾ ಜಾಣ್ಮೆಯುಳ್ಳವರು ಮತ್ತು ಮಾನವೀಯ ಗುಣಗಳುಳ್ಳ ವ್ಯಕ್ತಿಯಾಗಿದ್ದಾರೆ. ಅವರ ಸಂಬೋಧನೆ ಅತ್ಯುತ್ತಮ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿರುವ ಪ್ರಸಕ್ತ ವಾತಾವರಣದ ವಾಸ್ತವ ಚಿತ್ರಣ ಹೊರಹಾಕುವಂತಿದೆ.

Stefan lehsteld ಸಾಹಿಬ್ ಹೇಳಿದರು. ಇಮಾಮ್ ಜಮಾಅತ್ ಅಹ್ಮದಿಯಾ ಅವರು ತುಂಬ ವಿದ್ಯಾವಂತ ವ್ಯಕ್ತಿಗಳಾಗಿದ್ದಾರೆ. ಅವರನ್ನು ಭೇಟಿಯಾದ ಮೇಲೆ ತಿಳಿದು ಬಂತು ಅವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಳವಾದ ಜ್ಞನ ಹೊಂದಿದವರಾಗಿದ್ದಾರೆ. ಅವರು ಓರ್ವ ಘನತೆಯುಳ್ಳ ಮನುಷ್ಯರಾಗಿದ್ದಾರೆ. ಅವರು ಧರ್ಮ ಧರ್ಮಗಳ ಮಧ್ಯೆ ದಾರಿ ಸುಗಮಗೊಳಿಸುವವರಾಗಿದ್ದಾರೆ. ಪರಸ್ಪರರಲ್ಲಿರುವ ಆತಂಕಗಳನ್ನು ಹೋಗಲಾಡಿಸಲು ನಿಜವಾದ ಆಸಕ್ತಿಯುಳ್ಳವರಾಗಿದ್ದಾರೆ. ಅಂತರಾಷ್ಟ್ರೀಯ ಮತ್ತು ಅಂತರ ಧರ್ಮೀಯರ ಮಾತುಕತೆಗಳಲ್ಲಿ ಸಕರಾತ್ಮಕವಾದ ಧೋರಣೆಗಳಿಗೆ ಪುಷ್ಟಿ ನೀಡುವುದರಲ್ಲಿ, ಸ್ಥಾಪನೆ ನೀಡಲು ಪ್ರಯತ್ನಪಡುವವರಾಗಿದ್ದಾರೆ.

Felix Kuck ಸಾಹಿಬ್ ಹೇಳಿದರು. ನನಗೆ ಹುಝೂರರ ವ್ಯಕ್ತಿತ್ವ ಹೇಗೆ ಅನಿಸಿದೆ ಎಂದರೆ ಅವರಿಗೆ ಇಸ್ಲಾಮಿನ ಶಾಂತಿಯ ಸಂದೇಶವನ್ನು ಹರಡುವುದರಿಂದ ಲೋಕದ ಯಾವ ಶಕ್ತಿಯಿಂದಲೂ ತಡೆಯಲು ಸಾಧ್ಯವಿಲ್ಲ. ಅವರು ಶಕ್ತಿಯುಳ್ಳವರು ಮತ್ತು ಬಲಯುತ ವ್ಯಕ್ತಿಗಳಾಗಿದ್ದಾರೆ. ಅವರ ಮಾತುಗಳು ಬುನಾದಿಯು ಮಾನವೀಯತೆಯ ಕುರಿತು ಯಥಾರ್ಥವಾದ ಕಳಕಳಿ ಹಾಗೂ ಮಾನವ ಮೌಲ್ಯಗಳನ್ನು ಎತ್ತಿ ಹಿಡಿಯಲು ಅವಿರತ ಪ್ರಯತ್ನಗಳ ಮೇಲೆ ನಿಂತಿದೆ. ಇಂತಹ ಬಲಾಢ್ಯ, ಪವಿತ್ರ ಹಾಗೂ ಆತ್ಮೀಯ ಮನುಷ್ಯನ ಪ್ರಯತ್ನಗಳನ್ನು ತಡೆಯುವ ಶಕ್ತಿ ಯಾರಲ್ಲಿದೆ.

**27 ಅಕ್ಟೋಬರ್ 2019 (ಭಾನುವಾರ)**

ಹುಝೂರ್(ಅಬಿಅ) ಮುಂಜಾನೆ 6 ಗಂಟೆ 15 ನಿಮಿಷಕ್ಕೆ ಮಸ್ಜಿದ್ ಬಶಾರತ್ ಒಸ್ನಾಬ್ರೋಕ್ ಆಗಮಿಸಿದರು. ನಮಾಝ್ ಫಜ್ರ್ ನಿರ್ವಹಿಸಿಕೊಟ್ಟರು. ತಮ್ಮ ಪ್ರೀತಿಯ ಇಮಾಮರ ನೇತೃತ್ವದಲ್ಲಿ ನಮಾಝ್ ನಿರ್ವಹಿಸಲು ಮುಂಜಾನೆ 4 ಗಂಟೆಯಿಂದಲೇ ಒಂದು ಬಹು ದೊಡ್ಡ ಸಂಖ್ಯೆಯಲ್ಲಿ ಮಸ್ಜಿದ್ ಬರಲು ಆರಂಭಿಸಿದರು. ಮುಂಜಾನೆ ನಾಲ್ಕೂವರೆ ಗಂಟೆ ಆಗುವಷ್ಟರಲ್ಲಿ ಮಸೀದಿ ಒಳಗೆ ಹಾಗೂ ಹೊರಗೆ ಹಾಕಿರುವ ಮಾರ್ಕಿಗಳೆಲ್ಲ ಸ್ತ್ರೀ ಪುರುಷರಿಂದ ತುಂಬಿ ಹೋಗಿದ್ದವು. ಅವರೆಲ್ಲರೂ ಹುಝೂರರ ನೇತೃತ್ವದಲ್ಲಿ ನಮಾಝ್

ನಿರ್ವಹಿಸಿದರು.

ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿ ನಿಲಯಕ್ಕೆ ತೆರಳಿದರು. ಇಂದಿನ ಕಾರ್ಯಕ್ರಮದನ್ವಯ ಬ್ರಸಲ್ಸ್ (ಬೆಲ್ಜಿಯಂ) ಮಾರ್ಗವಾಗಿ ಇಸ್ಲಾಮಾಬಾದ್ ಯು.ಕೆ ಪ್ರಯಾಣಿಸಬೇಕಾಗಿತ್ತು.

ಹುಝೂರರಿಗೆ ವಿದಾಯ ಕೋರಲು ಜಮಾಅತಿನ ಸ್ತ್ರೀ ಪುರುಷರು, ಬಾಲಕ ಬಾಲಕಿಯರು ಮುಂಜಾನೆಯಿಂದಲೇ ಮಸೀದಿಯ ಹೊರಾಂಗಣದಲ್ಲಿ ಬಂದು ಸೇರತೊಡಗಿದ್ದರು. 10 ಗಂಟೆ 15 ನಿಮಿಷಕ್ಕೆ ಹುಝೂರ್ ತಮ್ಮ ವಸತಿ ನಿಲಯದಿಂದ ಹೊರಗೆ ಬಂದರು. ಕಾರ್ಯಕ್ರಮದನ್ವಯ ಓಸ್ನಾಬರೋಕ್ ಜಮಾಅತ್ತಿನ ಮಜ್ಲಿಸ್ ಆಮಿಲದ ಸದಸ್ಯರೆಲ್ಲರೂ ಸೇರಿ ಹುಝೂರರ ಜೊತೆಯಲ್ಲಿ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಓಸ್ನಾಬರೋಕಿನ ಮಜ್ಲಿಸ್ ಅತ್ಫಾಲುಲ್ ಅಹ್ಮದಿಯಾ ಈ ವರ್ಷ **"ಅಲಮ್ ಇನ್‌ಆಮಿ" (ಧ್ವಜ ಪಾರಿತೋಷಕ)** ಪಡೆದಿದ್ದರು. ಅವರು ತಮ್ಮ ಅಲಮ್ ಇನ್‌ಆಮಿ ಹಿಡಿದುಕೊಂಡು ತಮ್ಮ ಪ್ರೀತಿಯ ಇಮಾಮರ ಜೊತೆಯಲ್ಲಿ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಆ ನಡುವೆ ಸಣ್ಣ ಮಕ್ಕಳು ಒಂದು ಸಾಲಿನಲ್ಲಿ ನಿಂತುಕೊಂಡಿದ್ದರು. ಹುಝೂರ್ ಪ್ರೀತಿಪೂರ್ವಕವಾಗಿ ಆ ಮಕ್ಕಳಿಗೆ ಚಾಕ್ಲೆಟ್ ನೀಡಿದರು. ಅನಂತರ ಹುಝೂರ್ ಮಹಿಳೆಯರ ಕಡೆ ತೆರಳಿ ಬಾಲಕಿಯರಿಗೆ ಚಾಕ್ಲೇಟ್ ನೀಡಿದರು. ಆ ನಡುವೆ ಮಹಿಳೆಯರು ಸಹ ಹುಝೂರರ ದರ್ಶನ ಭಾಗ್ಯ ಪಡೆದರು.

10 ಗಂಟೆ 30 ನಿಮಿಷಕ್ಕೆ ಹುಝೂರ್ ದುಆ ಮಾಡಿಸಿದರು. ತಂಡ ಬ್ರಸಲ್ಸ್ (ಬೆಲ್ಜಿಯಂ) ಕಡೆ ಪ್ರಯಾಣಿಸಿತು. ಜರ್ಮನಿಯ ಒಂದು ವಾಹನ Escort ಮಾಡಿತು. ಉಳಿದ ಖುದ್ದಾಮರು ವಾಹನವನ್ನು ಹಿಂಬಾಲಿಸಿದರು.

Osrabrock ನಿಂದ ಬೆಲ್ಜಿಯಂನ ದೂರ ಒಟ್ಟು 389 ಕಿ.ಮೀ. ಜರ್ಮನಿಯಲ್ಲಿ 94 ಕಿ.ಮೀ ಪ್ರಯಾಣಿಸಿದ ನಂತರ ಗಡಿದಾಟಿ ಹಾಲೆಂಡ್ ದೇಶವನ್ನು ಪ್ರವೇಶಿಸಿದರು. ಹಾಲೆಂಡಿನಲ್ಲಿ 195 ಕಿ.ಮೀ ಪ್ರಯಾಣಿಸಿದ ನಂತರ ಬೆಲ್ಜಿಯಂ ಗಡಿ ಪ್ರವೇಶಿಸಿದರು. ಅಲ್ಲಿಂದ ಇನ್ನು 100 ಕಿ.ಮೀ ಪ್ರಯಾಣ ಬೆಳೆಸಿದ. ನಂತರ 2 ಗಂಟೆ 20 ನಿಮಿಷಕ್ಕೆ ಅಹ್ಮದಿಯಾ ಮಿಷನ್ ಹೌಸ್ ಬೈತುಸ್ಸಲಾಮ್ (ಬ್ರಸಲ್ಸ್) ಗೆ ಆಗಮಿಸಿದರು. ಬೆಲ್ಜಿಯಂನ ವಿವಿಧ ಜಮಾಅತುಗಳ ಸ್ತ್ರೀ ಪುರುಷರು ಮತ್ತು ನೆಷ್ನಲ್ ಮಜ್ಲಿಸ್ ಆಮಿಲ ಸದಸ್ಯರು ತಮ್ಮ ಪ್ರಿಯ ಇಮಾಮರಿಗೆ ಭವ್ಯ ಸ್ವಾಗತ ಕೋರಿದರು. ಪ್ರತಿಯೊಬ್ಬರು ತಮ್ಮ ಪ್ರೀತಿಯ ನಾಯಕರ ದರ್ಶನ ಪಡೆದು ಸಂತಸದಿಂದ ಬೀಗುತ್ತಿದ್ದರು. ಮತ್ತು ತಮ್ಮ ನಾಯಕರಿಗೆ ಶುಭಾಗಮನ ಹೇಳುತ್ತಿದ್ದರು.

ಮರಾಕಶ್ ದೇಶಕ್ಕೆ ಸಂಬಂಧಿಸಿದ ಓರ್ವ ಬಾಲಕ ಅಝೀಝುಂ ಅನೀಸ್ ಬಿಸಾಯಿ ಹುಝೂರರ ಸೇವೆಯಲ್ಲಿ ಪುಷ್ಪಗಳನ್ನು ಅರ್ಪಿಸಿದರು. ಹಾಗೆಯೇ ಅಝೀಝಾ ಆಯಿಶಾ ಬುಶ್ರಾ ಹಝ್‌ರತ್ ಬೇಗಮ್ ಸಾಹಿಬರ ಸೇವೆಯಲ್ಲಿ ಪುಷ್ಪ ಗುಚ್ಚಗಳನ್ನು ನೀಡಿದರು.

ಹುಝೂರ್ ವಾಹನದಿಂದ ಹೊರಗೆ ಬರುತ್ತಲೆ ಅಮೀರ್ ಸಾಹಿಬ್ ಬೆಲ್ಜಿಯಂ ಡಾ॥ ಇದ್ರೀಸ್ ಅಹ್ಮದ್ ಸಾಹಿಬ್, ಮುಬಲ್ಲಿಗೆ ಇನ್‌ಚಾರ್ಜ್ ಬೆಲ್ಜಿಯಂ ಹಾಫಿಝ್ ಇಹ್ಸಾನ್ ಸಿಕಂದರ್ ಸಾಹಿಬ್, ಸದರ್ ಖುದ್ಧಾಮುಲ್ ಅಹ್ಮದಿಯಾ ತೌಸೀಫ್ ಅಹ್ಮದ್ ಸಾಹಿಬ್, ಹುಝೂರರಿಗೆ ಸ್ವಾಗತ ಕೋರಿದರು. ಅನಂತರ ಹುಝೂರ್ ಮಿಷನ್ ಹೌಸಿನ ವಸತಿ ಭಾಗಕ್ಕೆ ತೆರಳಿದರು.

ಹುಝೂರ್ 2 ಗಂಟೆ 45 ನಿಮಿಷಕ್ಕೆ ಆಗಮಿಸಿ ಝುಹರ್ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝುಗಳ ನಿರ್ವಹಣೆಯ ನಂತರ ಹುಝೂರ್ ವಸತಿ ನಿಲಯದತ್ತ ತೆರಳಿದರು. 4 ಗಂಟೆ 10 ನಿಮಿಷಕ್ಕೆ ಹುಝೂರ್ ತಮ್ಮ ವಸತಿ ನಿಲಯದಿಂದ ಹೊರಗೆ ಬಂದರು.

ಮುಕರ್ರಮ್ ಅಮೀರ್ ಜಮಾಅತ್ ಅಹ್ಮದಿಯಾ ಜರ್ಮನಿ ಅಬ್ದುಲ್ಲಾ ವಾಗಸ್ ಹೌಝುರ್ ಸಾಹಿಬ್, ಮುಬಲ್ಲಿಗ್ ಇನ್‌ಚಾರ್ಜ್ ಜರ್ಮನಿ ಮುಕರ್ರಮ್ ಸದಾಖತ್ ಅಹ್ಮದ್ ಸಾಹಿಬ್, ಜನರಲ್ ಸೆಕ್ರೆಟರಿ ಮುಕರ್ರಮ್ ಇಲ್ಯಾಸ್ ಮಜೂಕ ಸಾಹಿಬ್, ಮುಕರ್ರಮ್ ಸದರ್ ಸಾಹಿಬ್ ಖುದ್ದಾಮುಲ್ ಅಹ್ಮದಿಯಾ ತಮ್ಮ ರಕ್ಷಣ ತಂಡದೊಂದಿಗೆ ಹುಝೂರರ ಹಸ್ತಲಾಘವ ಪಡೆಯುವ ಭಾಗ್ಯ ಪಡೆದರು. ಜರ್ಮನಿಯಿಂದ ಬಂದ ಈ ಖುದ್ದಾಮರ ರಕ್ಷಣ ತಂಡವು ಹುಝೂರರ ಜೊತೆಯಲ್ಲಿ ಬಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

ಅನಂತರ ಹುಝೂರ್ ಮಹಿಳೆಯರ ಕಡೆ ತೆರಳಿದರು. ಅಲ್ಲಿ ಮಹಿಳೆಯರೂ ದರ್ಶನ ಭಾಗ್ಯ ಪಡೆದರು. 4 ಗಂಟೆ 20 ನಿಮಿಷಕ್ಕೆ ಹುಝೂರ್ ಸಾಮೂಹಿಕವಾಗಿ ದುಆ ಮಾಡಿಸಿದರು. ಅನಂತರ ಕಾರ್ಯಕ್ರಮದನ್ವಯ ಇಲ್ಲಿಂದ ಫ್ರಾನ್ಸ್‌ನ ಸಮುದ್ರ ದಂಡೆ Calais ನತ್ತ ಪ್ರಯಾಣಿಸಿದರು. 6 ಗಂಟೆ 30 ನಿಮಿಷಕ್ಕೆ Channel Tunnel ಆಗಮಿಸಿದರು. ಜರ್ಮನಿಯಿಂದ ಹುಝೂರರಿಗೆ ಬೀಳ್ಕೊಡಲು ಬಂದಿದ್ದ ಖುದ್ದಾಮರ ರಕ್ಷಣಾ ತಂಡ, ಇತರ ಜಮಾಅತ್ ಬಾಂಧವರು channel Tunnel ವರೆಗೆ ಜೊತೆಯಲ್ಲಿದ್ದರು. ಅದೇ ರೀತಿ ಬೆಲ್ಜಿಯಂನ ಅಮಿರ್ ಸಾಹಿಬ್, ಮುಕರ್ರಮ್ ಅಸದ್ ಮುಜೀಬ್ ಸಾಹಿಬ್ ಮುಬಲ್ಲಿಗ್ incharge ಹಾಗೂ ಜನರಲ್ ಸೆಕ್ರೆಟರಿ, ಮುಕರ್ರಮ್ ಹಾಫಿಝ್ ಇಹ್‌ಸಾನ್ ಸಿಕಂದರ್ ಸಾಹಿಬ್ ಮುಬಲ್ಲಿಗ್ incharge ಬೆಲ್ಜಿಯಂ, ರಾಜ ಅಬ್ದುಲ್ ಲತೀಫ್ ಸಾಹಿಬ್ ನೇಷ್ನನಲ್ ಸೆಕ್ರೆಟರಿ ಜಾಯಿದಾದ್, ಹಾಮಿದ್ ಮಹಮ್ಮದ್ ಶಾಹ್ ಸಾಹಿಬ್ ಮಾಜಿ ಅಮೀರ್ ಜಮಾಅತ್ ಬೆಲ್ಜಿಯಂ, ಓರ್ವ ಅರಬ್ ನೌಮಬಾಯ್ ಇದ್ರೀಸ್ ಗರ್‌ಬೂಸ್ ಸಾಹಿಬ್ ಹುಝೂರರಿಗೆ ಇಲ್ಲಿಂದ ಲಂಡನ್ನಿಗೆ ವಿದಾಯ ಕೋರಲು ತಂಡದೊಂದಿಗೆ ಆಗಮಿಸಿದ್ದರು.

ಪಾಸ್‌ಪೋರ್ಟ್, ಇಮೆಗ್ರೇಷನ್ ಮತ್ತು ಇತರ ದಸ್ತಾವೇಜುಗಳ ತಪಾಸಣೆಯ ನಂತರ 7 ಗಂಟೆ 15 ನಿಮಿಷಕ್ಕೆ ತಂಡದ ವಾಹನಗಳು ರೈಲಿನಲ್ಲಿ ನಿಲ್ಲಿಸಲಾಯಿತು. ಆ ರೈಲು 7 ಗಂಟೆ 20 ನಿಮಿಷಕ್ಕೆ calais ಯಿಂದ ಬ್ರಿಟಾನಿಯಾದ ಕರಾವಳಿ ನಗರ channel Tunnel ಹಾದು Dover ಸಮೀಪದಿಂದ ಬ್ರಿಟಾನಿಯಾ ನೆಲ ಪ್ರವೇಶಿಸಿತು. ಮತ್ತು ತನ್ನ ವಿಶಿಷ್ಟವಾದ ನಿಲ್ದಾಣದಲ್ಲಿ ತಂಗಿತು. ಸುಮಾರು ಐದು ನಿಮಿಷದ ವಿರಾಮ ನಂತರ ಫ್ರಾನ್ಸ್‌ನ ಸಮಯದ ಅನ್ವಯ 8 ಗಂಟೆ ಮತ್ತು ಯು.ಕೆ. ಯ ಸಮಯ 7 ಗಂಟೆಗೆ ತಂಡದ ವಾಹನಗಳು ರೈಲಿನಿಂದ (ಬ್ರಿಟಾನಿಯಾದ ಸಮಯವು ಜರ್ಮನಿಗಿಂತ ಒಂದು ತಾಸು ಹಿಂದಿದೆ).

ಮುಕರ್ರಮ್ ರಫೀಕ್ ಹಯಾತ್ ಸಾಹಿಬ್ ಅಮಿರ್ ಜಮಾಅತ್ ಯು.ಕೆ., ಮುಕರ್ರಮ್ ಅಸಾಮಲ್ ಮುಜೀಬ್ ರಾಶಿದ್ ಸಾಹಿಬ್ ಮುಬಲ್ಲಿಗ್ incharge U.K ಮುಕರ್ರಮ್ ಮಿರ್ಝಾ ನಾಸಿರ್ ಇನ್‌ಆಮ್ ಸಾಹಿಬ್ ಪ್ರಾಂಶುಪಾಲರು ಜಾಮಿಯಾ ಅಹ್ಮದಿಯಾ ಯು.ಕೆ. ಮುಕರ್ರಮ್ ಮುಬಾರಕ್ ಅಹ್ಮದ್ ಝುವರ್ ಸಾಹಿಬ್ Add. ವಕೀಲುಲ್-ಮಾಲ್ ಲಂಡನ್, ಮುಕರ್ರಮ್ ಅಶ್‌ಲಾದ್ ಅಹ್ಮದ್ ಅಂಜುಮ್ ಸಾಹಿಬ್ (ದಫತರ್ ವಕಾಲತ್ ತಬ್‌ಶೀರ್, ಲಂಡನ್) ಮುಕರ್ರಮ್ ಅಬ್ದುಲ್ ಖುದ್ದೂಸ್ ಆರಿಫ ಸಾಹಿಬ್ ಸದರ್ ಖುದ್ದಾಮುಲ್ ಅಹ್ಮದಿಯಾ ಯು.ಕೆ. ಮುಕರ್ರಮ್ ನಸೀರುದ್ದೀನ್ ಹುಮಾಯೂನ್ ಸಾಹಿಬ್ (ಶೋಬಾ ಹಿಫಾಜತ್ ಖಾಸ್) ವಿಶೇಷ ರಕ್ಷಣಾ ವಿಭಾಗ, ರಕ್ಷಣಾ ತಂಡದೊಂದಿಗೆ ಹುಝೂರರಿಗೆ ಬರಮಾಡಿಕೊಳ್ಳಲು ಉಪಸ್ಥಿತರಿದ್ದರು.

ಸುಮಾರು 1 ಗಂಟೆ 40 ನಿಮಷಗಳ ಪ್ರಯಾಣ ನಂತರ 8 ಗಂಟೆ 40 ನಿಮಿಷಕ್ಕೆ ಇಸ್ಲಾಮಾಬಾದಿನಲ್ಲಿ ಸಮಾಗಮವಾಯಿತು. ಅಲ್ಲಿ ಜಮಾಅತ್ ಬಾಂಧವರು, ಸ್ತ್ರೀ ಪುರುಷರು ಒಂದು ದೊಡ್ಡ ಸಂಖ್ಯೆಯಲ್ಲಿ ತಮ್ಮ ಪ್ರೀತಿಯ ನಾಯಕರನ್ನು "ಅಹಲಂ ವ ಸಹಲಂ ವ ಮರ್ಹಬಾ ಹೇಳುತ್ತಾ ಶುಭಾಗಮನ ಕೋರಿದರು. ಹುಝೂರರ ವಸತಿಗೃಹದ ಹೊರ ಭಾಗವನ್ನು ಸುಂದರವಾದ ಧ್ವಜಗಳಿಂದ ಶೃಂಗರಿಸಲಾಗಿತ್ತು.

ಹುಝೂರ್ ವಾಹನದಿಂದ ಹೊರ ಬರುತ್ತಲೇ ಮುಕರ್ರಮ್ ಅಮೀರ್ ಸಾಹಿಬ್ ಯು.ಕೆ ರಫೀಕ್ ಅಹ್ಮದ್ ಹಯಾತ್ ಸಹಿಬ್, ಮುಬಲ್ಲಿಗ್ U.K ಮುಕರ್ರಮ್ ಅತಾವುಲ್ ಮುಜೀಬ್ ರಾಶದ್ ಸಹಿಬ್, ಹುಝೂರರಿಗೆ ಹಸ್ತಲಾಘವ ಮಾಡಿ ಸ್ವಾಗತ ಕೋರಿದರು. ಹುಝೂರ್(ಅಬಿಅ) ಆತ್ಮೀಯವಾಗಿ ತಮ್ಮ ಕೈಯೆತ್ತಿ ಎಲ್ಲರಿಗೂ ಅಸ್ಸಲಾಮು ಅಲೈಕುಂ ಹೇಳಿ ತಮ್ಮ ವಸತಿ ನಿಲಯಕ್ಕೆ ತೆರಳಿದರು.

ಹುಝೂರ್(ಅಬಿಅ) ಜೊತೆಯಲ್ಲಿ ಪ್ರವಾಸದಲ್ಲಿ ಪಾಲ್ಗೊಂಡಿದ್ದ ಆ ಭಾಗ್ಯವಂತರ ಹೆಸರುಗಳು ಕಡತದಲ್ಲಿ ಸೇರಿಸಲಾಗಿದೆ. ಅವು ಇಂತಿವೆ:

ಹಝ್‌ರತ್ ಸಯ್ಯದ ಅಮತುಸ್ಸುಬೂಹ್ ಸಾಹಿಬ (ಹಝ್‌ರತ್ ಅಮೀರುಲ್ ಮುಮಿನೀನ್‌ರವರ ಧರ್ಮ ಪತ್ನಿ), * ಮಾನ್ಯ ಮುನೀರ್ ಅಹ್ಮದ್ ಜಾವೇದ್ ಸಾಹೆಬ್ (ಪ್ರೈವೇಟ್ ಸೆಕ್ರೇಟರಿ), * ಆಬಿದ್ ವಹೀದ್ ಖಾನ್ ಸಾಹೆಬ್ (ಇನ್‌ಚಾರ್ಜ್ ಪ್ರಸ್ ಎಂಡ್ ಮೀಡಿಯ ಕಚ್ಚೇರಿ ಲಂಡನ್), * ಹಮ್ಮಾದ್ ಮುಬೀನ್ ಸಾಹೆಬ್ (ಮುಬಲಗಲಿಗ್, ಪ್ರೈವೇಟ್ ಸೆಕ್ರೇಟರಿ ಕಚ್ಚೇರಿ), * ಮಾನ್ಯ ಸಯ್ಯದ್ ಮುಹಮ್ಮದ್ ಅಹ್ಮದ್ ನಾಸಿರ್ ಸಾಹೆಬ್. * ಮಾನ್ಯ ನಾಸಿರ್ ಅಹ್ಮದ್ ಸಯೀದ್ ಸಾಃಎಬ್. * ಮಾನ್ಯ ಸಖಾವತ್ ಅಲೀ ಬಾಜ್ವ ಸಾಹೆಬ್. * ಮಾನ್ಯ ಖ್ವಾಜ ಖುದ್ದೂಸ್ ಸಾಹೆಬ್, * ಮಾನ್ಯ ಮಹ್ಮೂದ್ ಅಹ್ಮದ್ ಖಾನ್ ಸಾಹೆಬ್. * ಮಾನ್ಯ ಮಿರ್ಝ ಲಯೀಖ್ ಅಹ್ಮದ್ ಸಾಹೆಬ್. * ಮಾನ್ಯ ಇಬ್ರಾಹೀಮ್ ಮುನೀಬ್ ಅಹ್ಮದ್ ಮಲ್‌ಹಿ ಸಆಹೆಬ್, * ನಾನು ಅಬ್ದುಲ್ ಮಾಜಿದ್ ಅಹ್ಮದ್.

ಇವರಲ್ಲದೆ ಮಾನ್ಯ ನದೀಮ್ ಅಹ್ಮದ್ ಅಮೀನಿ ಸಾಹೆಬ್, ಮಾನ್ಯ ಮುಹಮ್ಮದ್ ಅಹ್ಮದ್ ಸಾಹೆಬ್, ಮಾನ್ಯ ಅಬ್ದುರ್ರಹ್ಮಾನ್ ಸಾಹೆಬ್, ಮಾನ್ಯ ರಾನಾ ಮಖ್ಸೂದ್ ಅಹ್ಮದ್ ಸಾಹೆಬ್ ಇವರೆಲ್ಲರು ತಂಡೆಯ ಗಾಡಿಗಳ ಚಾಲಕರಾಗಿ ಬಂದಿದ್ದರು.

ಎಮ್.ಟಿ.ಎ ಇಂಟರ್‌ನ್ಯಾಶ್ನಲ್(ಯು.ಕೆ) ವಿನ ಕೆಳಕಂಡ ನಮೂದಿಸಿದ ಸದಸ್ಯರು ಹುಝೂರ್ ಅನ್ವರ್‌ರವರ ಖುತ್‌ಬಾತ್ ಜುಮ್‌ಅ, ಹಾಲೆಂಡ್ ಮತ್ತು ಫ್ರಾನ್ಸ್‌ನ ಜಲ್ಸ ಸಾಲಾನ, ಹುಝೂರ್‌ರವರ ಸಂದರ್ಶನಗಳು ಮತ್ತು

ಪತ್ರಿಕಾ ಗೋಷ್ಠಿಗಳು, ಮಸೀದಿಗಳ ಉದ್ಘಾಟನಾ ಸಮಾರಂಭಗಳ ಭಾಷಣಗಳ ರೆಕಾರ್ಡಿಂಗ್ ಮತ್ತು Live ಟ್ರಾನ್ಸ್ಮೀಶನ್‌ಗಳಿಗಾಗಿ ಅವರೆಲ್ಲರು ಭಾಗವಹಿಸಿದ್ದರು. ಮಾನ್ಯ ಮುನೀರ್ ಅಹ್ಮದ್ ಓದಹ್ ಸಾಹೆಬ್, ಮಾನ್ಯ ಸಫೀರುದ್ದೀನ್ ಖಮರ್ ಸಾಹೆಬ್, ಮಾನ್ಯ ಅದ್ನಾನ್ ಝಾಹಿದ್ ಸಾಹೆಬ್, ಮಾನ್ಯ ಅಬ್ರಾರ್ ಬೇಗ್ ಸಾಹೆಬ್, ಮಾನ್ಯ ಝಕೀಉಲ್ಲಾಹ್ ಸಾಹೆಬ್, ಮನ್ಯ ಖಮರ್ ಅಹ್ಮದ್ ಝಫರ್ ಅಹ್ಮದ್ ಸಾಹೆಬ್.

ಎಮ್.ಟಿ.ಎ ತಂಡವಲ್ಲದೆ ಮಖ್ಝನೆ ತಸಾವೀರ್ ವಿಭಾಗದಿಂದ ಮಾನ್ಯ ಗದೀರ್ ಅಹ್ಮದ್ ಸಾಃಎಬರು ಈ ಪ್ರವಾಸದಲ್ಲಿ ಭಾಗವಹಿಸಿದ್ದರು. ಪ್ರವಾಸದ ಕವರೇಜಿಗಾಗಿ ರಿವೀವ್ ಆಫ್ ರಿಲೀಜಿಯನ್, ಅಲ್‌ಹಕಮ್ ಹಾಗೂ ಅಲ್‌ಫಝಲ್ ಇಂಟರ್‌ನ್ಯಾಶ್ನಲ್ ಪತ್ರಿಕೋದ್ಯಮದವರು ಭಾಗವಹಿಸಿದ್ದರು. ಜರ್ಮನಿಯಿಂದ ಡಾ॥ ಅತ್‌ಹರ್ ಝುಬೈರ್ ಸಾಹೆಬ್‌ರವರು ಈ ಪ್ರವಾಸದಲ್ಲಿ ವೈದ್ಯರಾಗಿ ಭಾಗವಹಿಸಿದ್ದರು. ಇವರಲ್ಲದೆ ಜರ್ಮನಿಯಿಂದ ಮಾನ್ಯ ಅಬ್ದುಲ್ಲಾಹ್ ಸಪ್ರಾ ಸಾಹೆಬ್ ಅವರು ಸಹ ಈ ತಂಡದೊಂದಿಗೆ ಭಾಗವಹಿಸಲು ಸೌಭಾಗ್ಯ ಪಡೆದರು. ಅಲ್ಲಾಹನು ಅವರೆಲ್ಲರನ್ನು ಈ ಭಾಗವಹಿಸುವ ಸೌಭಾಗ್ಯವನ್ನು ಅನುಗ್ರಹದಾಯಕವಾಗಿಸಲಿ. ಆಮೀನ್

**(ಉರ್ದು ಬದರ್ ವಾರಪತ್ರಿಕೆ 23-04-2020)**

****************

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ನ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅ)ರವರ ಹೊಸ ಖುತ್‌ಬ ಜುಮುಆ ಮತ್ತು ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರರ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕ)**

## ಸೂಚನೆ

ಓದುಗರಲ್ಲಿ ವಿನಂತಿಸಿಕೊಳ್ಳುವುದೇನಂದರೆ ಈ ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳು ಹಾಗೂ ಸಲಹೆ ಸೂಚನೆಗಳಿದ್ದಲ್ಲಿ ನಮ್ಮನ್ನು ನೇರವಾಗಿ ಸಂಪರ್ಕಿಸಿ.

**email: www.kannadabadar@gmail.com**

**Mob or whatsapp: 8050330779**

## ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್ರತ್ ಮಸೀಹ್ ಮೌಊದ್ ಅಲೂಹಿಸ್ಸಲಾಮ್ ಹೇಳುತ್ತಾರೆ:-**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರೀಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ-5, ಪುಟ-48-49, ಮುದ್ರಣ ಖಾದಿಯಾನ್ 2003)

**(ನಝಾರತ್ ಇಸ್ಲಾಹ್-ವ-ಇರ್‌ಶಾದ್ (ಮರ್‌ಕಝಿಯಾ, ಖಾದಿಯಾನ್)**

### *ಕವನ "ಮಹ್‌ಮೂದ್ ಕೀ ಆಮೀನ್"*

ಹಮ್‌ದೋ ಸನಾ ಉಸೀ ಕೋ ಜೋ ಝಾತ್ ಜಾವಿದಾನೀ
ಹಮ್‌ಸರ್ ನಹೀ ಹೇ ಉಸ್‌ಕಾ ಕೋಯೀ ನ ಕೋಯೀ ಸಾನೀ
**ಅರ್ಥ:** ಎಲ್ಲ ಸ್ತುತಿಗಳು ಶಾಶ್ವತವಾದ ಅಸ್ತಿತ್ವವುಳ್ಳವನಿಗೆ ಸಲ್ಲುತ್ತವೆ.
ಅವನಿಗೆ ಸಮಾನರು ಯಾರೂ ಇಲ್ಲ; ಸರಿಸಾಟಿಗಳೂ ಇಲ್ಲ.

ಬಾಖೀ ವಹೀ ಹಮೇಶ ಗೈರ್ ಉಸ್‌ಕೇ ಸಬ್ ಹೈಂ ಫಾನೀ
ಗೈರೋಂ ಸೇ ದಿಲ್ ಲಗಾನ ಝೂಟೀ ಹೇ ಸಬ್ ಕಹಾನೀ
**ಅರ್ಥ:** ಅವನೇ ಸದಾಕಾಲ ನಾಶವಾಗದೆ ಉಳಿಯುವವನು.
ಅವನ ಹೊರತು ಎಲ್ಲರೂ ನಶ್ವರರು.
ಅನ್ಯರೊಂದಿಗೆ ಹೃದಯಬಂಧ ಸ್ಥಾಪಿಸುವುದು
ಸುಳ್ಳು ಕತೆಯ ಹಾಗೆ ನಿರರ್ಥಕ.

ಸಬ್ ಗೈರ್ ಹೈಂ ವಹೀ ಹೇ ಇಕ್ ದಿಲ್ ಕಾ ಯಾರೆ ಜಾನೀ
ದಿಲ್ ಮೇ ಮೆರೆ ಯಹೀ ಹೇ ಸುಬ್‌ಹಾನ ಮೈಯ್ಯರಾನೀ
**ಅರ್ಥ:** ಅವನೊಬ್ಬನೇ ನನ್ನ ಪ್ರಾಣಮಿತ್ರ.
ಉಳಿದವರೆಲ್ಲರೂ ನನಗೆ ಅನ್ಯರು
ನನ್ನ ಹೃದಯದಲ್ಲಿ ಇದು ಮಾತ್ರವಿದೆ.
ನನ್ನನ್ನು ವೀಕ್ಷಿಸುವವನು ಪರಿಶುದ್ಧನು.

ಸಬ್ ಕಾ ವಹೀ ಸಹಾರಾ ರಹ್ಮತ್ ಹೇ ಆಶ್‌ಕಾರಾ
ಹಮ್ ಕೋ ವಹೀ ಪ್ಯಾರಾ ದಿಲ್‌ಬರ್ ವಹೀ ಹಮಾರಾ
ಅರ್ಥ: ಎಲ್ಲರಿಗೂ ಅವನೇ ಆಶ್ರಯದಾತನಾಗಿರುವನು –
ಅವನ ಕೃಪೆ ಬಹಿರಂಗವಾಗಿದೆ.
ಅವನು ನಮಗೆ ಅತ್ಯಂತ ಪ್ರಿಯಕರ,
ನಮ್ಮ ಹೃದಯಗಳಲ್ಲಿ ಅವನೇ ಇರುವನು.

ಉಸ್‌ಬಿನ್ ನಹೀ ಗುಝಾರಾ, ಗೈರ್ ಉಸ್‌ಕೇ ಝೂಟ್ ಸಾರಾ
ಯೆಃ ರೋಝ್ ಕರ್ ಮುಬಾರಕ್ ಸುಬ್‌ಹಾನ ಮಯ್ಯರಾನೀ
**ಅರ್ಥ:** ಅವನ ಹೊರತು ನಾವು ಜೀವಿಸಲಾರೆವು;
ಅವನ ಹೊರತು ಎಲ್ಲವೂ ಮಿಥ್ಯ
ಈ ದಿನವನ್ನು ಅನುಗ್ರಹೀತವನ್ನಾಗಿ ಮಾಡು –
ನನ್ನನ್ನು ವೀಕ್ಷಿಸುವವನು ಪರಿಶುದ್ಧನು.

***(ಮಹ್‌ಮೂದ್ ಕೀ ಆಮೀನ್; ರೂಹಾನೀ ಖಝಾಇನ್ ಸಂಪುಟ 12, ಪುಟ 319)***

**ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್ ಸಹಯೋಗದಲ್ಲಿ ನಡೆಯುತ್ತಿರುವ ನೂರ್ ಆಸ್ಪತ್ರೆಯ ಎಕ್ಸ್‌ರೇ (XRay) ಹಾಗೂ ದಂತ (Dental) ವಿಭಾಗದಲ್ಲಿ ಮಹಿಳಾ ಟೆಕ್‌ನೀಶಿಯನ್ (Lady Technician) ನ ಎರಡು ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.**

ಅರ್ಜಿ ಸಲ್ಲಿಸುವ ಮಹಿಳೆಯರು ಕೆಳಗೆ ನಮೂದಿಸಿದ ಶರತ್ತುಗಳನ್ನು ಪೂರೈಸುವವರಾಗಿರಬೇಕು:–

**ಮಹಿಳಾ ಟೆಕ್‌ನಿಶಿಯನ್ (Lady Technician) ಹುದ್ದೆ ಎಕ್ಸರೇ X Ray ವಿಭಾಗ ನೂರ್ ಆಸ್ಪತ್ರೆ ಖಾದಿಯಾನ್‌ನ ಶರತ್ತುಗಳು:**

1) ಅಭ್ಯರ್ಥಿಯು ಅಧಿಕೃತ ಸಂಸ್ಥೆಯಿಂದ "Diploma in Radiology technology" ಮಾಡಿರಬೇಕು. ಹಾಗೂ Digital technology and Competency In ECG Technology ಅದರಲ್ಲಿ ಕನಿಷ್ಠ 3 ವರ್ಷಗಳ ಅನುಭವ ಪಡೆದಿರಬೇಕು.

2) ಅಭ್ಯರ್ಥಿಗೆ ಉತ್ತಮ Good Communication Skill ನಿರ್ಬಂದವಾಗಿದೆ.

**ದಂತ(Dental) ವಿಭಾಗದಲ್ಲಿ ಮಹಿಳಾ ಟೆಕ್ನಿಶಿಯನ್ (Lady Technician)ನ ಹುದ್ದೆಗಾಗಿ ನೂರ್ ಹಾಸ್ಪಿಟಲ್ ಖಾದಿಯನ್‌ನ ಶರತ್ತುಗಳು:**

1) ಅಭ್ಯರ್ಥಿ ರಿಜಿಸ್ಟರ್‌ಗೊಂಡ ಹಾಗೂ ಮಂಜೂರಿ ಪಡೆದ ಸಂಸ್ಥೆಯಿಂದ Diploma in Dentistry ಮಾಡಿರಬೇಕು. ಮತ್ತು ಅದರಲ್ಲಿ ಕನಿಷ್ಠ ಮೂರು ವರ್ಷಗಳ ಅನುಭವ ಪಡೆದಿರಬೇಕು.

2) ಅಭ್ಯರ್ಥಿಯಲ್ಲಿ ಉತ್ತಮ 'Communication Skill' ನಿರ್ಬಂದವಾಗಿದೆ.

**ಎರಡು ಹುದ್ದೆಯ ಶರತ್ತುಗಳು:–**

1) ಅಭ್ಯರ್ಥಿಯ ವಯಸ್ಸು 22 ರಿಂದ 32 ವರ್ಷಗಳ ಒಳಗಿರಬೇಕು.

2) ಕೇಂದ್ರ ಆಯ್ಕೆ ಸಮಿತಿಯಿಂದ ಏರ್ಪಡಿಸಲಾದ ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಮಾತ್ರ ಸಂದರ್ಶನಕ್ಕೆ ಕರೆಯಲಾಗುವುದು.

3) ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಉತ್ತೀರ್ಣರಾದವರು ನೂರ್ ಹಾಸ್ಪಿಟಲ್ ಖಾದಿಯಾನ್ ಅವರಿಂದ Medical Fitness Certificate ಪ್ರಸ್ತುತ ಪಡಿಸಬೇಕಾಗುವುದು.

4) ಸಂದರ್ಶನಕ್ಕೆ ಹಾಜರಾದ ಅಭ್ಯರ್ಥಿ, ಖಾದಿಯಾನ್ ಆಗಮನ ನಿರ್ಗಮನದ ಖರ್ಚು ಮತ್ತು ಎಲ್ಲ ವೈದ್ಯಕೀಯ ಖರ್ಚುಗಳನ್ನು ತಾವೇ ವಹಿಸಿಕೊಳ್ಳಬೇಕಾಗುವುದು.

5) ಅಯ್ಕೆಯಾದಲ್ಲಿ ಖಾದಿಯಾನಿನಲ್ಲಿ ವಸತಿ ಸೌಕರ್ಯದ ಜವಾಬ್ದಾರಿ ಅಭ್ಯರ್ಥಿಯದ್ದಾಗಿರುತ್ತದೆ.

6) ಅಭ್ಯರ್ಥಿಯು ನಝೂರತ್ ದಿವಾನ್ ವತಿಯಿಂದ ಜಾರಿಯಾದ ಅರ್ಜಿ ನಮೂನೆಯೊಂದಿಗೆ. ಶೈಕ್ಷಣಿಕ ಅರ್ಹತಾ ಪ್ರಮಾಣಪತ್ರಗಳು, Experience Certificate, ಜನ್ಮ ದಿನಾಂಕದ ದೃಢೀಕರಣ ಪತ್ರ, ಆಧಾರ್ ಕಾರ್ಡ್, ವೋಟರ್ ಐ.ಡಿ., ಜಮಾಅತಿನ ಐ.ಡಿ ಕಾರ್ಡ್‌ಗಳ ದೃಢೀಕೃತ ಫೋಟೋ ಕಾಪಿ ಹಚ್ಚುವುದು ಅನಿವಾರ್ಯವಾಗಿರುತ್ತದೆ.

7) ಬದರ್ ಪತ್ರಿಕೆಯಲ್ಲಿ ಪ್ರಕಟಣೆಗೊಂಡ ಎರಡು ತಿಂಗಳ ನಂತರ ಪರೀಕ್ಷೆಯ ತಾರೀಖು ತಿಳಿಸಲಾಗುವುದು.

8) ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ತಮ್ಮ ಭರ್ತಿಗೊಂಡ ಅರ್ಜಿಯ ಮೇಲೆ ತಮ್ಮ ಜಿಲ್ಲಾ ಅಮಿರ್/ಸ್ಥಳೀಯ ಅಮೀರ್/ ಸದರ್/ ಸದರ್ ಲಜ್ನ/ ಮುಬಲ್ಲಿಗ್ ಇನ್‌ಚಾರ್ಜ್‌ರವರ ದೃಢೀಕೃತ ಸಹಿ ಹಾಗೂ ಮೊಹರಿನೊಂದಿಗೆ ಕಳುಹಿಸತಕ್ಕದ್ದು.

9) ಅಭ್ಯರ್ಥಿಯು ಸಂದರ್ಶನಕ್ಕೆ ಬರುವಾಗ ತಮ್ಮ Original, (ಅಸಲು) ಪ್ರಮಾಣಪತ್ರಗಳನ್ನು ಅವಶ್ಯವಾಗಿ ಜೊತೆಯಲ್ಲಿ ತರಬೇಕು.

10) ಅಭ್ಯರ್ಥಿಯು ವಕ್ಫೆನೌ ಆಗಿದ್ದಲ್ಲಿ ಸದರ್ ಅಂಜುಮನ್ ಅಹ್ಮದಿಯಾದ ಯಾವುದೆ ಹುದ್ದೆಗೆ ಅರ್ಜಿ ಸಲ್ಲಿಸುವುದಾದರೆ ಮುಂಚಿತವಾಗಿ ಸಯ್ಯದನಾ ಹುಝೂರ್ ಅನ್ವರ್‌ರವರಿಂದ ಮಂಜೂರಿ ಪಡೆದ ಪತ್ರದ ನಕಲು ಪ್ರತಿ ಲಗತ್ತಿಸುವುದು ಅನಿವಾರ್ಯವಾಗಿರುತ್ತದೆ.

11) ಹುದ್ದೆಗೆ ಸಂಬಂಧಿಸಿದ ಅರ್ಜಿಯನ್ನು ನಝೂರತ್ ದೀವಾನ್‌ನಿಂದ ಪಡೆಯಬಹುದಾಗಿದೆ. ಅರ್ಜಿ ಭರ್ತಿ ಮಾಡಿ ಕೊಟ್ಟ ನಂತರ ಕಾಯಿದೆ ಕಾನೂನಿನ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

**ಸದರ್ ಅಂಜುಮನ್ ಅಹ್ಮದಿಯಾ, ಅಂಜುಮನ್ ತಹರೀಕ್ ಜದೀದ್, ಅಂಜುಮನ್ ವಖ್ಫ್ ಜದೀದ್ ಖಾದಿಯಾನಿನ ಸಂಸ್ಥೆಗಳಲ್ಲಿ ನಾಲ್ಕನೆ ದರ್ಜೆಯ ಹುದ್ದೆಗೆ ಸಂಬಂಧಿಸಿದ ವಿಭಾಗದಲ್ಲಿ ಉದ್ಯಾನಪಾಲಕ (ಮಾಲಿ), Care taker, ಅಡುಗೆ ಭಟ್ಟ (ಬಾವರ್ಚಿ) ನಾನ್ ಬಾಯ್ (ರೊಟ್ಟಿ ಮಾಡುವವ), ಖಾದಿಮ್ ಮಸ್ಜಿದ್ (ಮಸೀದಿ ಸೇವಕ) ಹುದ್ದೆಗಳನ್ನು ತುಂಬಬೇಕಾಗಿದೆ.**

ಸೇವೆ ಸಲ್ಲಿಸ ಬಯಸುವ ಅಭ್ಯಥಿಗಳು ಕೆಳಗೆ ನಮೂದಿಸಿದ ಶರತ್ತಿನೊಂದಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಅಭ್ಯರ್ಥಿಯು ಮೇಲ್ಕಾಣಿಸಿದ ಯಾವುದೇ ಹುದ್ದೆ ಪಡೆದಲ್ಲಿ ಖಾದಿಯಾನ್ ಅಥವಾ ಖಾದಿಯಾನಿನ ಹೊರ ವಲಯದ ಎಲ್ಲಿಯಾದರೂ ನಿಯುಕ್ತಗೊಳಿಸಬಹುದಾಗಿದೆ.

**ಶರತ್ತುಗಳು:**

1) ಅಭ್ಯರ್ಥಿಗೆ ಯಾವುದೇ ಶೈಕ್ಷಣಿಕ ಶರತ್ತು ಇರುವುದಿಲ್ಲ.

2) ಅಭ್ಯರ್ಥಿಯ ವಯಸ್ಸು 23 ವರ್ಷಗಳಿಗಿಂತ ಕಡಿಮೆ ಇರುವುದು ಅವಶ್ಯವಾಗಿದೆ.

3. ಜನನ ದೃಢೀಕರಣ ಪತ್ರ (Birth certificate) ಪ್ರಸ್ತುತಪಡಿಸುವುದು ಅನಿವಾರ್ಯವಾಗಿದೆ.

4) ಕೇಂದ್ರ ಆಯ್ಕೆ ಸಮಿತಿಯಿಂದ ನಡೆಸುವ ಸಂದರ್ಶನದಲ್ಲಿ ಉತ್ತೀರ್ಣಗೊಂಡ ಅಭ್ಯರ್ಥಿಗಳನ್ನು ಮಾತ್ರ ಸೇವೆಗೆ ಅರ್ಹರೆಂದು ಪರಿಗಣಿಸಲಾಗುವುದು.

5) ನೂರ್ ಹಾಸ್ಪಿಟಲ್ ಖಾದಿಯಾನ್‌ನ ಮೆಡಿಕಲ್ ಬೋರ್ಡಿನಿಂದ ದೊರೆತ ಆರೋಗ್ಯ ವರದಿಯ ಆದಾರದಲ್ಲಿ ಅಭ್ಯರ್ಥಿಯನ್ನು ಸೇವೆಗೆ ಸ್ವೀಕರಿಸಲಾಗುವುದು.

6) ಅಭ್ಯರ್ಥಿಯು ಖಾದಿಯಾನಿಗೆ ಆಗಮಿಸುವ ಹಾಗೂ ನಿರ್ಗಮಿಸುವ ಖರ್ಚು ಸ್ವತಹಃ ನೋಡಿಕೊಳ್ಳುವುದು.

7) ಯಾವುದೇ ಅಭ್ಯರ್ಥಿ ಆಯ್ಕೆಯಾದಲ್ಲಿ ಖಾದಿಯಾನಿನಲ್ಲಿ ತನ್ನ ವಸತಿ ವ್ಯವಸ್ಥೆ ಸ್ವಯಂ ಮಾಡಿಕೊಳ್ಳಬೇಕಾಗುತ್ತದೆ.

8) ಆಸಕ್ತಿಯುಳ್ಳ ಅಭ್ಯರ್ಥಿಗಳು ಅರ್ಜಿ ನಮೂನೆಗಳನ್ನು ನಝೂರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನಿನಿಂದ ಪಡೆಯಬಹುದಾಗಿದೆ.

ಈ ಜಾಹಿರಾತಿನ ಎರಡು ತಿಂಗಳ ಒಳಗೆ ಬರುವ ಅರ್ಜಿಗಳನ್ನು ಪರಿಶೀಲಿಸಲಾಗುವುದು **(ನಾಝಿರ್ ದೀವಾನ್ ಖಾದಿಯಾನ್)**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

**ನಝೂರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್**

**email: diwan@qadian.in**

**ದೂರವಾಣಿ ಸಂಖ್ಯೆಗಳು : ಕಛೇರಿ: 01872–501130, ಮೊಬೈಲ್: 9646351280, 9877138347**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Vol No.1 Thursday, 09 July 2020 Issue No. 26

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಯೂರೋಪ್ ಪ್ರವಾಸ (ಸೆಪ್ಟೆಂಬರ್, ಅಕ್ಟೋಬರ್ 2019)*

**(ಬದರ್ ಸಂಚಿಕೆ 25ರ ವರದಿಯ ಉಳಿದ ಭಾಗ)**

steffan weber ಎಂಬ ಅತಿಥಿಗಳು ಅವರು ಸ್ಥಳೀಯ ಅಸೆಂಬ್ಲಿಯ ಸದಸ್ಯರಾಗಿರುವವರು ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು. ಈ ಸಮಾರಂಭವು ಅತ್ಯಂತ ಯಶಸ್ವಿಯಾಗಿದೆ. ನೀವೆಲ್ಲರೂ ಅಷ್ಟೊಂದು ಪ್ರೀತಿ ಸ್ನೇಹದಿಂದ ವರ್ತಿಸುತ್ತಿದ್ದೀರಿ. ಖಲೀಫರ ಸಂಬೋಧನೆಯು ಅತ್ಯುತ್ತಮವಾಗಿತ್ತು. ಮೊದಲು ಅವರು ಎಲ್ಲರ ಭಾಷಣಗಳ ಸಾರಾಂಶವನ್ನು ವಿವರಿಸಿದರು ಮತ್ತು ಅದರ ಜೊತೆ ತಮ್ಮ ವಿಚಾರಗಳನ್ನು ಜೋಡಿಸಿದರು. ಆ ಮೂಲಕ ಒಂದು ಅಭಿರುಚಿ ಮೂಡಿಸಿದರು. ನಾನಂತೂ ತುಂಬ ಆಸಕ್ತಿಯಿಂದ ಅವರ ಭಾಷಣವನ್ನು ಆಲಿಸುತ್ತಿದ್ದೆ.

ELKA Christinn Roder ಸಾಹಿಬಾ ಎಂಬ ಮಹಿಳಾ ಅತಿಥಿಯೊಬ್ಬರು Nordenstedt ನಗರದ ಲಾರ್ಡ್ ಮೇಯರ್ ಆಗಿರುವವರು, ಹೇಳುತ್ತಾರೆ ಕಾರ್ಯಕ್ರಮದ ವ್ಯವಸ್ಥೆಗಳು ಬಹಳ ಚೆನ್ನಾಗಿದ್ದವು. ಯಾರಾದರೊಬ್ಬರು ನಮ್ಮ ಜೊತೆಗಿದ್ದು ನಾನು ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡುತ್ತಿದ್ದರು. ಖಲೀಫರು ನನ್ನ ದೃಷ್ಟಿಯಲ್ಲಿ ಒಬ್ಬ ಅತ್ಯಂತ ಪ್ರಭಾವಿ ವ್ಯಕ್ತಿಯಾಗಿರುವವರು. ನನಗೆ ಊಟದ ಸಮಯದಲ್ಲಿ ಅವರೊಡನೆ ಮಾತನಾಡುವ ಸಂದರ್ಭ ದೊರೆತಿತ್ತು. ಅವರು ತುಂಬ ಒಳ್ಳೆಯ ವ್ಯಕ್ತಿಯಾಗಿರುವವರು. ವಿಶೇಷವಾಗಿ ಅವರು ಇಂದು ಹೇಳಿದ ಮಾತುಗಳಿಂದಾಗಿ ಹಲವರಿಗೆ ಇಸ್ಲಾಮಿನ ಬಗ್ಗೆ ಇದ್ದ ದೃಷ್ಟಿಕೋನ ಬದಲಾಗಿದೆ. ಶಾಂತಿ ಸ್ಥಾಪನೆಗೋಸ್ಕರ ನಾವೆಲ್ಲರೂ ಸೇರಿ ಕೆಲಸ ಮಾಡಬೇಕಾಗಿದೆ ಎಂಬ ಅವರ ಮಾತಿಗೆ ವಿಶೇಷ ಮಹತ್ವವಿದೆ. ಅದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ. ಖಲೀಫರ ಈ ಸಂದೇಶವನ್ನು ಜಮಾಅತ್ ಸದಸ್ಯರು Nordersted ನಗರದಾದ್ಯಂತ ಪ್ರಸಾರ ಮಾಡಬೇಕೆಂದು ನಾನು ಬಯಸುತ್ತೇನೆ. ಇಂದಿನ ದಿನವು ನನಗೆ ತುಂಬ ಪ್ರಯೋಜನಕಾರಿಯಾಗಿದೆ. ನಾನು ಅದಕ್ಕಾಗಿ ಕೃತಜ್ಞಳಾಗಿದ್ದೇನೆ.

Angelika Rubmann ಸಾಹಿಬಾ ಮತ್ತು ಅವರ ಪತಿ Karlhenmann ಸಾಹಿಬ್ ತಮ್ಮ ಅನಿಸಿಕೆಗಳನ್ನು ಹೀಗೆ ಹಂಚಿಕೊಂಡರು. ಇಂದು ಖಲೀಫರ ಉಪಸ್ಥಿತಿ ತುಂಬ ಆಕರ್ಷಣೀಯವಾಗಿ ಭಾವಿಸುತಿತ್ತು. ಅವರ ವ್ಯಕ್ತಿತ್ವದಿಂದ ಒಂದು ಶಾಂತಿ ಪ್ರಕಟವಾಗುತಿತ್ತು. ಇತರರ ಮೇಲು ಅವರ ಪ್ರಭಾವ ಕಾಣಬಹುದಾಗಿತ್ತು. ಏಕೆಂದರೆ ಈ ಮಸೀದಿಯ ಉದ್ಘಾಟನೆಯ ವಿಷಯ ಕೇವಲ ಅಹ್ಮದಿಯಾ ಜಮಾಅತಿನ ಸದಸ್ಯರಿಗಷ್ಟೇ ಅಲ್ಲ. ಬದಲಾಗಿ ಈ ಕ್ಷೇತ್ರದವರಿಗೂ ಒಂದು ಅತ್ಯಂತ ಸಂತೋಷದ ಸಂದರ್ಭವಾಗಿದೆ. ಖಲೀಫರನ್ನು ನೋಡುತ್ತಲೇ ಅವರು ಒಬ್ಬ ಪ್ರಮುಖ ವ್ಯಕ್ತಿಗಳು ಎಂಬುದು ಸ್ಪಷ್ಟವಾಗುತ್ತದೆ. ನನ್ನ ದೃಷ್ಟಿಯಲ್ಲಿ ನಮಗೆ ಪೋಪ್ ಕ್ಯಾಥೋಲಿಕ್ ಕ್ರೈಸ್ತರಲ್ಲಿರುವ ಸ್ಥಾನವೇ ನಿಮ್ಮಲ್ಲಿ ಖಲೀಫರದ್ದಾಗಿರಬಹುದು ಎಂದಾಗಿದೆ. ನಮಗೂ ಇದು ತುಂಬ ಗೌರವದ ವಿಷಯವಾಗಿದೆ. ಇಂತಹ ಒಬ್ಬ ವ್ಯಕ್ತಿಯೊಡನೆ ಮಾತನಾಡುವ ಸಂದರ್ಭ ಒದಗಿ ಬಂದಿದೆ. ನನಗೆ ಈ ಭೇಟಿ ಅನುಗ್ರಹದಾಯಕವಾಗಿ ಕಂಡಿತು. ಮತ್ತು ಖಲೀಫರ ಸಂಬೋಧನೆಯಲ್ಲಿ ನನಗೆ ಅತ್ಯಂತ ಪ್ರಮುಖ ಎನಿಸಿದ ಮಾತು. ನಮಗೆ ಇತರರ ಬಗ್ಗೆಯಿರುವ ಆತಂಕಗಳನ್ನು ಕೊನೆಗಾಣಿಸಬೇಕಾಗಿದೆ. ಆಗ ಮಾತ್ರ ಶಾಂತಿ ಸ್ಥಾಪಿಸಲು ಸಾಧ್ಯವಾದೀತು. ಮತ್ತು ಈ ಕಾಲದ ಸಮಸ್ಯೆಗಳು ಅಂತ್ಯವಾಗಬಹುದು.

Susanne Hahn ಸಾಹಿಬಾ ಅವರು ಪ್ರೊಟೆಸ್ಟೆಂಟ್ ಚರ್ಚಿನ ಪಾದರಿಯಾಗಿರುವರು ತಮ್ಮ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸಿದರು. ಇಂದು ಜರುಗಿದ ಈ ಸಮಾರಂಭ ಮತ್ತು ಇಲ್ಲಿ ಭಾಗವಹಿಸಿದ ಸಂಖ್ಯೆ ಈ ನಗರದಲ್ಲಿ ಪ್ರಥಮ ಬಾರಿಯಾಗಿದೆ. ಅಹ್ಮದಿಯಾ ಜಮಾಅತ್ತಿನ ಈ ಮಸೀದಿ ನಿರ್ಮಾಣದಿಂದಾಗಿ ನನಗೆ ತುಂಬ ಸಂತೋಷವಾಗಿದೆ. ಖಲೀಫರು ತಮ್ಮ ಸಂಬೋಧನೆಯಲ್ಲಿ ನಮ್ಮ ಭಾಷಣಗಳನ್ನು ಪ್ರಸ್ತಾಪಿಸಿದ್ದಾರೆ ಮತ್ತು ತಮ್ಮ ಸಲಹೆಗಳನ್ನು ನೀಡಿದ್ದಾರೆ. ನನಗೆ ಸಂತೋಷ ನೀಡಿದ ವಿಷಯವೆಂದರೆ ಅವರು ಮತ್ತು ನಾವು ಹೇಳುವುದು ಒಂದೇ, ಅಲ್ಲಾಹನು ಮಾತ್ರ ಸರ್ವಲೋಕಗಳ ಮಾಲೀಕನಾಗಿದ್ದಾನೆ ಖಲಿಫರು ಇಲ್ಲಿ ಆಗಮಿಸಿದ್ದು ಕೇವಲ ಅಹ್ಮದಿಯರಿಗಷ್ಟೇ ಅಲ್ಲ ಬದಲಾಗಿ ಎಲ್ಲ ನೆರೆಹೊರೆಯವರಿಗೂ ತುಂಬ ಸಂತೋಷ ಹಾಗೂ ಗೌರವದ ಮಾತಾಗಿದೆ.

Antje ಸಾಹಿಬಾ ಹೇಳುತ್ತಾರೆ. ಇಂದಿನ ಸಮಾರಂಭವು ತುಂಬ ಪ್ರಭಾವಪೂರ್ಣವಾಗಿತ್ತು. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಜನರು ಸೇರಿದ್ದರೂ ವ್ಯವಸ್ಥೆ ತುಂಬ ಅಚ್ಚುಕಟ್ಟಾಗಿತ್ತು. ಶಾಂತಿಯ ವಾತಾವರಣ ನೆಲೆಸಿತ್ತು. ವಿವಿಧ ಜನರಿಗೆ ಅಭಿಪ್ರಾಯ ಹೇಳಲು ಕೊಟ್ಟ ವಿಷಯವು ತುಂಬ ಮೆಚ್ಚುಗೆಯಾಯಿತು. ಅಂದರೆ ಧಾರ್ಮಿಕ ಹಾಗೂ ರಾಜಕಾರಣಿಗಳು, ಸ್ತ್ರೀ ಮತ್ತು ಪುರುಷರು ತಮ್ಮ ವಿಚಾರಗಳನ್ನು ಹಂಚಿಕೊಂಡಿದ್ದಾರೆ. ಅದಾದ ನಂತರ ಖಲೀಫರ ಸಂಬೋಧನೆಯೂ ತುಂಬ ಒಳ್ಳೆಯದಾಗಿತ್ತು. ಎಲ್ಲರೂ ಐಕ್ಯತೆಯಿಂದಿರಬೇಕು ಎಂಬ ಮಾತು ತುಂಬ ಇಷ್ಟವಾಯಿತು. ನನಗೆ ಮೊದಲ ಬಾರಿಗೆ ಖಲೀಫರನ್ನು ಕಾಣುವ ಸಂದರ್ಭ ಒದಗಿದೆ.

ಇನ್ನೊರ್ವ ಅತಿಥಿಗಳು ಹೇಳುತ್ತಾರೆ. ಇಂದು ನನಗೆ ಖಲಿಫರ ಭಾಷಣ ತುಂಬ ಮೆಚ್ಚುಗೆಯಾಯಿತು. ಏಕೆಂದರೆ ಅವರು ನಮ್ಮಲ್ಲಿರುವ ಇಸ್ಲಾಮಿನ ಕುರಿತು ಆತಂಕಗಳನ್ನು ದೂರ ಮಾಡಿದ್ದಾರೆ. ಅವರು ಹೇಳಿರುವ ಸಮಾನತೆಯ ಮಾತುಗಳು ಎಲ್ಲ ಧರ್ಮೀಯರಿಗೆ ಮಹತ್ವದ್ದಾಗಿವೆ.

Astrid Huemke ಅವರು Quickborn ನ Vice Mayor ಆಗಿರುವವರು. ಹೇಳುತ್ತಾರೆ. ನಾನು ಮರಳಿ ಹೋಗಿ ಖಲೀಫರ ಈ ಮಾತುಗಳನ್ನು ಇತರರಿಗೆ ತಿಳಿಸುವೆನು. ಯಾರಾದರೂ ಇಸ್ಲಾಮಿನ ಬಗ್ಗೆ ಆಕ್ಷೇಪ ಮಾಡಿದರೆ, ಖಲೀಫರ ಮಾತುಗಳನ್ನು ಉತ್ತರವಾಗಿ ಇಸ್ಲಾಮಿನ ಪರ ವಹಿಸುವೆನು. ಖಲೀಫರು ನಮಗಷ್ಟೇ ಸಂಬೋಧಿಸಲಿಲ್ಲ. ತಮ್ಮ ಜಮಾಅತ್ತಿನವರಿಗೂ ಉಪದೇಶ ನೀಡಿರುವವರು. ಮಸೀದಿ ಆದ ನಂತರವೂ ನೀವು ಮೊದಲಿಗಿಂತ ಹೆಚ್ಚು ಜನರ ಸೇವೆ ಮಾಡಬೇಕು ಎಂದು.

ಅತಿಥಿಯೋರ್ವರು ವೃತ್ತಿಯಿಂದ ದಂತತಜ್ಞರಾಗಿದ್ದರು ಅವರು ಹೇಳುತ್ತಾರೆ. ಖಲಿಫರು ತಮ್ಮ ಭಾಷಣದಲ್ಲಿ ಹೇಳಿರುವ ಎಲ್ಲ ಮಾತುಗಳೊಂದಿಗೆ ನಾನು ಸಹಮತ ಹೊಂದಿದ್ದೇನೆ. ಕ್ರೈಸ್ತ ಮತದಲ್ಲಿರುವ ಹಲವು ಮಾತುಗಳನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿರುವರು. ಇನ್ನೊಂದು ಅವರ ಮಾತು ನನ್ನ ಮೇಲೆ ಪ್ರಭಾವ ಬೀರಿದ್ದೇನೆಂದರೆ, ನಮ್ಮ ದೇಶದಲ್ಲಿ ಹರಡಿರುವ ಅಶಾಂತಿಯ ಪರಿಹಾರವನ್ನು ಅವರು ಸೂಚಿಸಿರುತ್ತಾರೆ.

Witecke ಸಾಹಿಬ್ ವೃತ್ತಿಯಲ್ಲಿ ವಕೀಲರಾಗಿರುವರು ಹೇಳುತ್ತಾರೆ. ಸಮಾರಂಭದ ವಾತಾವರಣದಲ್ಲಿ ಇಮಾಮ್ ಜಮಾಅತರ ಉಪಸ್ಥಿತಿ ಒಂದು ಅದ್ಭುತವಾದ ಪ್ರಭಾವ ಬೀರುತ್ತಿತ್ತು. ಅವರ ಆಧ್ಯಾತ್ಮಿಕ ಶಕ್ತಿಯ ಕಾರಣದಿಂದ ಅವರ ಭಾಷಣವು ನೇರವಾಗಿ ಪರಿಣಾಮ ಬೀರುತಿತ್ತು. ಅವರು ತಮ್ಮ ಸಂಬೋಧನೆಯಲ್ಲಿ ತೋರಿಸಿದ ಮಹಿಳೆಯರ ಸ್ಥಾನಮಾನ ಮತ್ತು ಗೌರವ ಸ್ಪಷ್ಟವಾಗಿದೆ.

ಮೇಯರ್ (Bauer ) ಸಾಹಿಬ್ ಹೇಳಿದರು. ಅಹ್ಮದಿಯಾ ಜಮಾಅತ್ತಿನ ಪರಿಚಯವಾದಾಗಿನಿಂದಲೂ ಜಮಾಅತ್ತಿನ ನಡತೆ ಮೌಲ್ಯಗಳು ನನ್ನ ಮೇಲೆ ಒಳ್ಳೆಯ ಪ್ರಭಾವ ಬೀರಿದೆ. ಆದರೆ ಇಂದು ನಿಮ್ಮ ಖಲೀಫರಿಂದ ಭೇಟಿ ಆದ ನಂತರ ಆ ಮೌಲ್ಯಗಳ ಮೂಲ ಯಾರು ಎಂಬುದು ತಿಳಿದಂತಾಗಿದೆ. ಇಂತಹ ಘನತೆಯುಳ್ಳ ಹಾಗೂ ಪ್ರತಾಪಶಾಲಿ ನೇತೃತ್ವ ಅವರು ಯಾವಾಗಲೂ ಜಮಾಅತಿನ ಸಾಮಾಜಿಕ, ನೈತಿಕ ಮತ್ತು ಆಧ್ಯಾತ್ಮಿಕ ತರಬೇತಿಯ ಕುರಿತು ಚಿಂತಿಸುವವರಾಗಿದ್ದಾರೆ. ಇಂತಹ ನೇತೃತ್ವ ಪಡೆದ ನೀವು ಧನ್ಯರು. ಅದನ್ನು ಪದಗಳಲ್ಲಿ ವಿವರಿಸಲು ಸಾಧ್ಯವಿಲ್ಲ.

Mayor ಬ್ರಾಂಡ್ ಡಂಗರ್ ಸಾಹೇಬ್ ಹೇಳಿದರು. ನಿಮ್ಮ ಖಲೀಫರ ಬಾಷಣವು ತುಂಬ ಪ್ರಭಾವಪೂರ್ಣವೂ ಹಾಗೂ ನಿದ್ದೆಯಿಂದ

*(ಉಳಿದ ವರದಿ ಪುಟ ಸಂಖೆ 08 ರಲ್ಲಿ ಓದಿರಿ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.